


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

SK NEWS ಕನ್ನಡ



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 06 Issue : 302 Sunday 21-04-2024 E-mail : maruti.b.hosamani76@gmail.com Page: 4 Price : Rs. 1/-


# ಸುಕ್ಷೇತ್ರ ಗೋಲಗೇರಿ ಶ್ರೀ ಗೋಲ್ಲಾಳೇಶ್ವರ ಜಾತ್ರಾ ನಿಮಿತ್ಯ ಪೂರ್ವಭಾವಿ ಸಭೆ



**ಗೋಲಗೇರಿ :** ಸಿಂದಗಿ ತಾಲ್ಲೂಕಿನ ಸುಕ್ಷೇತ್ರ ಗೋಲಗೇರಿ ಶ್ರೀ ಗೋಲ್ಲಾಳೇಶ್ವರ ಜಾತ್ರಾ ಹಾಗೂ ಭವ್ಯ ರಥೋತ್ಸವದ ಅಂಗವಾಗಿ ಪೂರ್ವಭಾವಿ ಸಭೆ ಜರುಗಿತು. ಈ ಸಭೆಯಲ್ಲಿ ಗೋಲ್ಲಾಳೇಶ್ವರ ದೇವಸ್ಥಾನದ ಧರ್ಮದರ್ಶಿಗಳಾದ ಹೊಳೆಪ್ಪ ಶರಣರು ದೇವರಮನಿ ರವಿರಾಜ. ದೇವರಮನಿ, ಕಲಕೇರಿ ಪೋಲಿಸ್ ಠಾಣೆಯ ಪೋಲಿಸ್ ಸಬ್ ಇನ್ಸಪೆಕ್ಟರ್ ರೋಹಿಣಿ ಪಾಟೀಲ, ಕೆಡಿಪಿ ಸದಸ್ಯರಾದ ಶಿವಯೋಗೆಪ್ಪ. ಹತ್ತರಕಿ, ಎ.ಡಿ.ಕೋರವಾರ, ಗೌಡಣ್ಣ. ಆಲಮೇಲ, ದಯಾನಂದ. ಮಠ,ಗೌತಮ. ಮೇಟಿ ಮಾತನಾಡಿ ಜಾತ್ರೆ ಸುಗಮವಾಗಿ ನಡೆಯಲು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಈ ಸಭೆಯಲ್ಲಿ ಗೋಲಗೇರಿ ಗ್ರಾಮ ಪಂಚಾಯತಿ ಅಧ್ಯಕ್ಷರ ಪ್ರತಿನಿಧಿ ಸೈಪನ್. ಕೋರವಾರ, ಬಸವರಾಜ.ಮಾರಲಭಾವಿ,ಮಡಿವಾಳ.ನಾಯ್ಕೋಡಿ,ಶಿವಪುತ್ರ.ಕರ್ನಾಳ,ವಿಶ್ವರಾಧ್ಯ.ಮಠ,ಸಲೀಮ್. ಭಾಗವಾನ,ನಿಂಗನಗೌಡ.ಬಿರಾದಾರ,ಮಹಾಂತೇಶ .ಸಾತಿಹಾಳ,ದವಲಸಾಬ.ಮನಿಯಾರ,ಗೌಡಣ್ಣಬಜಂತ್ರಿ,ಶರಣಗೌಡ.ಬಿರಾದಾ,ಮಂಜುನಾಥ.ನಾಯ್ಕೋಡಿ,ರಮೇಶ.ತಳವಾರ,ಶಿವರಾಜ.ತಳವಾರ,ಭಾಗಣ್ಣ. ಕೋಟೆಗೋಳ ಸೇರಿದಂತೆ ಗೋಲಗೇರಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು,ಭಕ್ತಾದಿಗಳು ಉಪಸ್ಥಿತರಿದ್ದರು ಕಾರ್ಯಕ್ರಮವನ್ನು ಕಲಕೇರಿ ಪೋಲಿಸ್ ಪೇದೆ ದೇವೆಂದ್ರ. ಹುಲಂಕಿ ಯವರು ನಿರೂಪಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ. ಹಚ್ಯಾಳ ದೇವರ ಹಿಪ್ಪರಗಿ**

# ಬದುಕಿಗೆ ಗುರಿ, ದಾರಿ ತೋರುವ ಗುರುಗಳಿಗೆ ವಂದನೆ...

ತಾಯಿ ಮಡಲಿನಲ್ಲಿ ಹಸುಗೂಸು ಕಣ್ಣು ತೆರೆದರೂ ಒಳಗಣ್ಣು ತೆರೆಯುವುದು ಗುರುವಿನ ಸಮಕ್ಷಮದಲ್ಲಿ. ವಿದ್ಯಾರ್ಥಿ ಜೀವನದಲ್ಲಿ ತಪ್ಪೊಪ್ಪುಗಳನ್ನು ತಿದ್ದಿ ಹೇಳಿ ಉತ್ತಮ ವ್ಯಕ್ತಿತ್ವದ ರೂಪಿಸಿ ಒಬ್ಬ ಆದರ್ಶ ವ್ಯಕ್ತಿಯನ್ನಾಗಿ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುವ ಗುರುಗಳು ನಮ್ಮ ಜೀವನದ ಪುಟಗಳಲ್ಲಿ ಅಜರಾಮರಾಗಿರುವವರು. ಒಂದು ಗಿಡಕ್ಕೆ ಪರಿಪೂರ್ಣವಾದ ಪೋಷಕಾಂಶಗಳನ್ನು ನೀಡಿದರೆ ಮಾತ್ರ ಆ ಗಿಡ ಸಮೃದ್ಧವಾಗಿ ಬೆಳೆಯಲು ಸಾಧ್ಯ. ನಿಸ್ವಾರ್ಥ ಮನಸ್ಸಿನಿಂದ ಎಲ್ಲರನ್ನು ತಮ್ಮ ಮಕ್ಕಳಂತೆ ಪಾಲನೆ ಮಾಡಿ ನೀತಿ ತತ್ವಗಳನ್ನು ಧಾರೆಯೆರೆಯುವ ಶಿಕ್ಷಕರು ನಮ್ಮ ಜೀವನದ ಅಮೂಲ್ಯ ರತ್ನಗಳು.

ಶಿಕ್ಷಕರು ವಿದ್ಯಾರ್ಥಿಗಳನ್ನು ತಾಯಿಯಂತೆ ಕೈ ಹಿಡಿದು ಮಮತೆಯಿಂದ, ಪ್ರೀತಿಯಿಂದ ತಮ್ಮೆಲ್ಲಾ ಶಕ್ತಿಯೊಂದಿಗೆ ವಿದ್ಯಾರ್ಥಿಗಳನ್ನು ಗಮನಿಸಿ ಅವರ ಉದ್ಧಾರಕ್ಕಾಗಿ ಶ್ರಮಿಸುತ್ತಿರುತ್ತಾರೆ. ಪ್ರತಿಕ್ಷಣ ಪ್ರತಿ ಸಮಯ ವಿದ್ಯಾರ್ಥಿಗಳ ಬಗ್ಗೆ ವಿಚಾರವನ್ನು ಮಾಡಿ ಅವರನ್ನು ಉದ್ಧಾರ ಮಾಡುತ್ತಾರೆ. ವಿದ್ಯಾರ್ಥಿಗಳನ್ನು ಶುದ್ಧ ಮಾಡಿ ಅವರನ್ನು ಮೋಕ್ಷದ ಕಡೆಗೆ ಕರೆದುಕೊಂಡು ಹೋಗುತ್ತಾರೆ. ಭಗವಂತ ಬೇಡಿದನ್ನೆಲ್ಲಾ ಕೊಟ್ಟರೆ ಗುರುಗಳು ಅವಶ್ಯಕತೆ ಇದ್ದದ್ದನ್ನು ಕೇಳದೆಯೇ ಕೊಡುತ್ತಾರೆ. ಒಮ್ಮೆ ಶಿಷ್ಯನ ಕೈ ಹಿಡಿದರೆ ಗುರುಗಳು ಬಿಡುವುದೇ ಇಲ್ಲ. ಈ ರೀತಿಯಲ್ಲಿ ಗುರುಗಳು ಮಾರ್ಗದರ್ಶನದಲ್ಲಿ ನಡೆದು ಭವಸಾಗರದಂತೆ ಇರುವ ನಮ್ಮ ಜೀವನ ನೌಕೆಯನ್ನು ಗುರುಗಳೇ ನಡೆಸಬಲ್ಲರು. ಜೀವನದಲ್ಲಿ ಬರುವ ಸಂಕಟಗಳನ್ನು ಸಹಿಸುವ ಕ್ಷಮತೆಗಳನ್ನು



ಕೊಡುವಂತ ಗುರುಗಳನ್ನು ಸದಾ ಸ್ಮರಿಸಿ ನಮ್ಮ ಜೀವನದ ದೋಷಗಳನ್ನು ತೆಗೆದು ಸುಗಂಧಪೂರಿತವಾದ ಜೀವದ ಪುಷ್ಪವನ್ನು ಗುರುಗಳ ಚರಣಕ್ಕೆ ಅರ್ಪಣೆ ಮಾಡುವುದು ವಿದ್ಯಾರ್ಥಿಗಳ ಮುಖ್ಯ ಧರ್ಮವೇ ಆಗಿದೆ.

ಗುರು ಎಂಬುದು ಬೌತಿಕ ವಸ್ತುವಲ್ಲ. ಜ್ಞಾನ ಎಂಬುದನ್ನು ಶಿಷ್ಯನಲ್ಲಿಗೆ ಪ್ರವಹಿಸುವಂತೆ ಮಾಡುವ ಶಕ್ತಿ. ಶಿಷ್ಯನನ್ನು ಒಂದು ಹಿಮಗಲ್ಲು ಎಂದು ಭಾವಿಸಿದರೆ ಜ್ಞಾನ ಎಂಬುದು ಕುದಿಯುವ ನೀರಿನಂತೆ. ಗುರು ಈ ಕುದಿಯುವ ನೀರನ್ನು ಶಿಷ್ಯ ಎಂಬ ಹಿಮಗಲ್ಲಿನ ಮೇಲೆ ನಿಧಾನವಾಗಿ ಹನಿ ಸುರಿಯುತ್ತಾ ಬರುತ್ತಾನೆ. ಇಲ್ಲದಿದ್ದರೆ ಹಿಮಗಲ್ಲು ಬಿರುಕು ಬಿಡುತ್ತದೆ. ಗುರು ಶಿಷ್ಯನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾನೆ. ವಿಕಸನದ ಪ್ರಯಾಣದಲ್ಲಿ ಗುರು ಅಕ್ಷರಶಃ ಶಿಷ್ಯನನ್ನು ಹೊತ್ತೊಯ್ಯುತ್ತಾನೆ.

**ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರ!**

**ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ!**

ಗುರುವೇ ಬ್ರಹ್ಮ, ಗುರುವೇ ವಿಷ್ಣು ಮತ್ತು ಗುರುವೇ ಶಂಕರ. ಗುರುವೇ ನಿಜವಾದ ಪರಮ ಬ್ರಹ್ಮ ಅಂತಹ ಗುರುಗಳಿಗೆ ನಾನು ನಮಿಸುತ್ತೇನೆ. ಮಕ್ಕಳಲ್ಲಿನ ಜ್ಞಾನವನ್ನು ಹೆಚ್ಚಿಸಿ ಅವರನ್ನು ಇನ್ನಷ್ಟು ಬೌದ್ಧಿಕವಾಗಿ ಬಲಗೊಳಿಸುವವನೇ ಶಿಕ್ಷಕನಾಗಿರುತ್ತಾನೆ. ಮಕ್ಕಳಲ್ಲಿರುವ ಪ್ರತಿಭೆಗೆ ಪ್ರೋತ್ಸಾಹ ಕೊಟ್ಟು ಮುನ್ನಡೆಸುತ್ತಾರೆ.

ಪ್ರತಿಯೊಬ್ಬ ವಿದ್ಯಾರ್ಥಿ ಜೀವನದಲ್ಲಿ ಸರಿಯಾದ ಮಾರ್ಗವನ್ನು ತೋರಿಸುವವರು ಶಿಕ್ಷಕರು. ತಮ್ಮ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಎತ್ತರವನ್ನು ತಲುಪಬೇಕೆಂದು ಬಯಸುವ ನಮ್ಮ ಪೋಷಕರ ಮುಂದಿನ ಹಿತೈಷಿಗಳಲ್ಲಿ ಶಿಕ್ಷಕರನ್ನು ಒಬ್ಬರು ಎಂದು ಪರಿಗಣಿಸಲಾಗುತ್ತದೆ. ನಮ್ಮ ಪೋಷಕರ ನಂತರ, ನಮ್ಮ ಎಲ್ಲಾ ಅಂಶಗಳಲ್ಲಿ ಯಾವಾಗಲೂ ನಮ್ಮನ್ನು ಬೆಂಬಲಿಸುವವರು ಮತ್ತು ಪ್ರೋತ್ಸಾಹಿಸುವವರು ಶಿಕ್ಷಕರಾಗಿರುತ್ತಾರೆ.

ಅಜ್ಞಾನದ ಕಳೆಯ ಕಿತ್ತು, ಸುಜ್ಞಾನದ ಬೀಜ ಬಿತ್ತಿ, ಸದ್ಗುಣಗಳ ಗೊಬ್ಬರ ಹಾಕಿ, ನವ ಚೇತನದ ಫಲವ ಮೂಡಿಸಿ, ದೇಶಕ್ಕೆ ಒಳಿತೆಂಬ ಗಾಳಿಯು ಅಳಿಯದೆ ಉಳಿಸಿ ಸಿಗುವಂತೆ ಮಾಡುವವರೇ ನಮ್ಮೆಲ್ಲರ ಗುರುಗಳು. ಪ್ರತಿ ಹೆಜ್ಜೆಯಲ್ಲೂ ವಿದ್ಯಾರ್ಥಿಗಳ ಕೈ ಹಿಡಿದು ದಾರಿ ತೋರಿದ ಕಾಣದ ಕೈಗಳು ಶಿಕ್ಷಕರು. ಬದುಕಲು ಉಸಿರಾಟ ಎಷ್ಟು ಮುಖ್ಯವೋ ಹಾಗೆ ಪ್ರತಿಯೊಬ್ಬರ ಬಾಳಿನ ಜ್ಯೋತಿ ಬೆಳಗಲು ಗುರುಗಳ ಪಾತ್ರ ಅಷ್ಟೇ ಮುಖ್ಯವಾದದ್ದು. ಗುರುವಿಲ್ಲದೆ ಈ ಪ್ರಪಂಚದಲ್ಲಿ ಎಲ್ಲವೂ ಅಪೂರ್ಣ.

"ವಿದ್ಯಾರ್ಥಿಗಳ ಬಾಳ ಹೊಂಬೆಳಕು ಶಿಕ್ಷಕರು " ಎಂದರೆ ತಪ್ಪಾಗಲಾರದು. ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆ ಹಿಂದೆ ಶಿಕ್ಷಕರ ಪಾತ್ರ ತುಂಬಾ ಮಹತ್ವದಾಗಿದೆ. " ತಾಯಿ ಜೀವ ನೀಡಿ-ದರೆ ಶಿಕ್ಷಕರು ಜೀವನವನ್ನೇ ನೀಡುತ್ತಾರೆ " ಎಂಬ ಮಾತು ಅಕ್ಷರಶಃ ಸತ್ಯ. ಶಿಕ್ಷಕರು ವಿದ್ಯಾರ್ಥಿಗಳನ್ನು ನದಿ ದಾಟಿಸುವ ನಾಯಕರು ಹೌದು. ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯದ ಬಗ್ಗೆ ಗುರಿ ಕಟ್ಟಿ ಕೊಡುವವರು ಗುರುಗಳು.

**ದೀಪ ತಾನು ಉರಿದು ಜಗತ್ತಿಗೆ ಬೆಳಕು ನೀಡುವ ಹಾಗೆ ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ಯುವ ಪ್ರತಿಯೊಬ್ಬ ಗುರುವಿಗೂ ನನ್ನ ಕೋಟಿ ಕೋಟಿ ನಮನಗಳು....!**

ಎತ್ತಲೋ ಸಾಗುತ್ತಿದ್ದ ಈ ಜೀವನದ ಹಾದಿಯಲಿ ಸರಿದಾರಿಯ ತೋರಿ ಜ್ಞಾನದ ದೀವಿಗೆಯ ಬೆಳಗಿದ ಗುರು ನೀವು. ತಪ್ಪು ಮಾಡಿದಾಗ ಮಾತಲ್ಲೆ ಶಿಕ್ಷಿಸಿ ಕ್ಷಮಿಸಿ ತಿದ್ದಿ ನಡೆದಾಗ ಮನದಲ್ಲೇ ಆನಂದಿಸಿದ ಶಿಕ್ಷಕರು ನೀವು. ಅಕ್ಕರೆಯಿಂದ ಅಕ್ಷರ ಕಲಿಸಿ ಜಗದ ಶ್ರೇಷ್ಠರ ವಿಚಾರ ತಿಳಿಸಿ ನಾವು ಅವರಂತಾಗಬೇಕೆಂದು ಪ್ರೇರೇಪಿಸಿದವರು ನೀವು. ಪೋಷಕರಂತೆ ಪ್ರೀತಿ ತೋರಿ ಸ್ನೇಹಿತರಂತೆ ಜೊತೆಗೂಡಿ ಪ್ರತಿ ಸೋಲು ಗೆಲುವಿನಲ್ಲಿ ಧೈರ್ಯ ತುಂಬಿದವರು ನೀವು. ನಿಮಗುಂಟು ಎಣಿಕೆಗೆ ಸಿಗದ ಶಿಷ್ಯವೃಂದ ಅದರಲ್ಲಿ ನಾನೊಂದು ಚುಕ್ಕಿ ಎಂಬುದು ಪರಮಾನಂದ.

* * *



**ಕು. ಜ್ಯೋತಿ ಆನಂದ ಚಂದುಕರ**
**ಬಾಗಲಕೋಟ**

# ಕೃಷ್ಣರಾಜಪೇಟೆ: ಯೋಜನಾಧಿಕಾರಿಯಾಗಿ ತಿಲಕ್ ರಾಜ್ ಅಧಿಕಾರ ಸ್ವೀಕಾರ

**ಕೃಷ್ಣರಾಜಪೇಟೆ :** ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಯೋಜನಾಧಿಕಾರಿಯಾಗಿ ತಿಲಕ್ ರಾಜ್ ಅಧಿಕಾರ ಸ್ವೀಕಾರ.





ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆಯ ಕೃಷ್ಣರಾಜಪೇಟೆ ತಾಲೂಕು ಯೋಜನಾಧಿಕಾರಿಯಾಗಿ ವರ್ಗಾವಣೆಗೊಂಡು ಆಗಮಿಸಿರುವ ಸಂಘಟನಾ ಚತುರ, ದಕ್ಷ ಆಡಳಿತಗಾರ ತಿಲಕ್ ರಾಜ್ ಅವರು ಯೋಜನಾ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು ಕಳೆದ 5ವರ್ಷಗಳಿಂದ ಯೋಜನಾಧಿಕಾರಿಯಾಗಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡ ಮಮತಾ ಶೆಟ್ಟಿ ಅವರಿಗೆ ನೀಡಿ-ದಂತೆ ತಮಗೂ ಉತ್ತಮ ಸಹಕಾರ ನೀಡುವ ಮೂಲಕ ಯೋಜನೆಯ ಕಾರ್ಯ ಚಟುವಟಿಕೆಗಳು ಶೇಕಡ 100ಕ್ಕೆ 100ರಷ್ಟು ಅನುಷ್ಠಾನವಾಗುವ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಮನವಿ ಮಾಡಿದ ತಿಲಕ್ ರಾಜ್ ಯೋಜನಾ ಕಛೇರಿಯ ಸಿಬ್ಬಂದಿಗಳು ನೀಡಿದ ಹೃದಯ ಸ್ಪರ್ಶಿ ಅಭಿನಂದನೆಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಯೋಜನಾ ಕಛೇರಿಯ ಸಿಬ್ಬಂದಿಗಳು ಹಾಗೂ ಯೋಜನಾ ಮೇಲ್ವಿಚಾರಕರು ಮತ್ತು ಸೇವಾಪ್ರತಿನಿಧಿಗಳು ಉಪಸ್ಥಿತರಿದ್ದರು.

**ವರದಿ : ಸಾಯಿಕುಮಾರ್. ಎನ್. ಕೆ,**

# ತಾಲೂಕು ಕ್ರೀಡಾಂಗಣದಲ್ಲಿ ಸ್ವಚ್ಛತಾ ಅಭಿಯಾನ

## ಪರಿಸರ ಸ್ವಚ್ಛತೆ ಪ್ರತಿಯೊಬ್ಬರ ಕರ್ತವ್ಯ: ಡಾ. ಬಸವರಾಜ

**ಕೊಪ್ಪಳ :** ಪರಿಸರ ಸ್ವಚ್ಛವಾಗಿರಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಹೇಳಿದರು.

ತಾಲೂಕು ಕ್ರೀಡಾಂಗಣದಲ್ಲಿ ಬುಧವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಸಾರ್ವಜನಿಕರು ಹಾಕಿದ ಪ್ಲಾಸ್ಟಿಕ್ ಬಾಟಲಿ ಸೇರಿ ಕಸವನ್ನು ಗುರುವಾರ ಬೆಳಗ್ಗೆ ಸ್ವಚ್ಛಗೊಳಿಸಿ ಮಾತನಾಡಿದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2014 ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣವೇ ಸ್ವಚ್ಛತಾ ಮಿಷನ್ ಆರಂಭಿಸಿದರು. ಸ್ವಚ್ಛತೆ ಬಗ್ಗೆ ಜನರಿಗೆ ಮನವರಿಕೆ ಮಾಡುವ ಮೂಲಕ ಸ್ವಚ್ಛ ಭಾರತ ನಿರ್ಮಾಣ ಮಾಡುತ್ತಿದ್ದಾರೆ. ಅವರ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು. ಆದ್ದ-ರಿಂದ ಮನೆ ಸೇರಿ ಸುತ್ತಲಿನ ಪರಿಸರದಲ್ಲಿ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದರು.

ಬಹಿರ್ದೆಸೆ ಮುಕ್ತ ದೇಶ ನಿರ್ಮಾಣದ ಗುರಿ ಹೊಂದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವಚ್ಛ ಭಾರತ ಮಿಷನ್ ನಡಿ ವೈಯಕ್ತಿಕ ಶೌಚಾಲಯ ಹಾಗೂ ಸಮುದಾಯ ಶೌಚಾಲಯ ನಿರ್ಮಾಣಕ್ಕೆ ಅನುದಾನ ನೀಡಿ-ದ್ದಾರೆ. ಆದ್ದರಿಂದಲೇ ಪ್ರತಿ ಮನೆಯಲ್ಲೂ ಶೌಚಾಲಯ ನಿರ್ಮಾಣವಾಗಿದೆ ಎಂದು ಕೇಂದ್ರ ಸರ್ಕಾರದ ಸಾಧನೆಯನ್ನು ತಿಳಿಸಿದರು.

ಬಿಜೆಪಿ ಮುಖಂಡರಾದ ಬಸವರಾಜ ಗೌರ, ವಕೀಲ ಪ್ರಕಾಶ್ ಪರ್ವತಗೌಡ, ಡಾ. ಕವಿ ಪಾಟೀಲ್, ಸುನೀಲ್ ಹೆಸರೂರು, ರಮೇಶ್ ಕವಲೂರು, ವಿ.ಬಿ.ಅಂಗಡಿ, ರಾಜೇಂದ್ರ ಕುಮಾರ್, ಅಂಬರೇಶ್ ಮುರಳಿ, ಅಸ್ಲಾಂಪಾಷಾ, ಮಲ್ಲಿಕಾರ್ಜುಕಟ್ಟಿ, ಸಂತೋಷ್, ಮಂಜುನಾಥ ಗುದಗಿ, ಮಾರುತಿ ನಾಯಕ್, ಸದ್ದಾಂ ಖಾಜಿ, ಮಹೆಬೂಬ್ ಕರಡಿ, ಮಂಜುನಾಥ್ ಉಲ್ಲತ್ತಿ, ಚನ್ನಬಸವ ಗಾಳಿ, ಬಿಜೆಪಿ- ಜೆಡಿಎಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ವಿದ್ಯಾರ್ಥಿ-ಯುವಜನರ ಆಶೋತ್ತರಗಳಿಗೆ ಸ್ಪಂದಿಸುವುದು ರಾಜಕೀಯ ಪಕ್ಷಗಳ ಆದ್ಯತೆಯಾಗಬೇಕು

**ಇಳಕಲ್ :** ಈ ಬಾರಿಯ 2024ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿ ವಿದ್ಯಾರ್ಥಿ-ಯುವಜನರ ಬೇಡಿಕೆಯ ವಿಚಾರಗಳನ್ನು ಸೇರಿಸಲು ಮತ್ತು ಈ ಹಕ್ಕೊತ್ತಾಯಗಳೇ ಚುನಾವಣೆಯ ಚರ್ಚಾ ವಿಷಯವಾಗುವುದರ ಜೊತೆಗೆ ವಿದ್ಯಾರ್ಥಿ-ಯುವಜನರ ಮತಗಳನ್ನು ನಿರ್ಣಯಿಸುವಂತೆ ಜನಾಭಿಪ್ರಾಯ ಮೂಡಿಸಲು "ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ"ವು ವಿದ್ಯಾರ್ಥಿ-ಯುವಜನ ಪ್ರಣಾಳಿಕೆಯನ್ನು ತಯಾರುಗೊಳಿಸಿದ್ದು, ನಗರದ ಕಂಠಿ ವೃತ್ತದ ಬಳಿಯಿರುವ ಇಬ್ರಾಹಿಂಮಸ್ಜಿದ್‌ಕೆಳಮಹಡಿ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಲಾಯಿತು.

**ಪ್ರಣಾಳಿಕೆಯ ಪ್ರಮುಖ ಬೇಡಿಕೆಗಳು.**

**ಪ್ರಾಥಮಿಕ ಶಿಕ್ಷಣ-**

1) ಶಿಕ್ಷಣ ಹಕ್ಕು ಕಾಯ್ದೆಯ ಸಮರ್ಪಕ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು

2) ಸಂವಿಧಾನದ ಶೆಡ್ಯೂಲ್ 7ರ ಸಮವರ್ತಿ ಪಟ್ಟಿಯಲ್ಲಿರುವ ಶಿಕ್ಷಣದ ವಿಷಯವನ್ನು ಪುನಃ ರಾಜ್ಯ ಪಟ್ಟಿಗೆ ಸೇರಿಸಬೇಕು.

3) ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳನ್ನು ಮುಚ್ಚುವ/ವಿಲೀನಗೊಳಿಸುವ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ಜಾರಿಯಲ್ಲಿವೆ. ಇದು ಕೇವಲ ಸಾರ್ವಜನಿಕ ಶಾಲಾ ವ್ಯವಸ್ಥೆಯ ಮೇಲಿನ ಆಕ್ರಮಣವಲ್ಲ, ಬದಲಿಗೆ ಇದು ವಿದ್ಯಾರ್ಥಿಗಳನ್ನು,ವಿಶೇಷವಾಗಿ ಅಂಚಿನಲ್ಲಿರುವ ಸಮುದಾಯಗಳನ್ನು ಶಿಕ್ಷಣ ವ್ಯವಸ್ಥೆಯಿಂದ ಹೊರದೂಡುತ್ತದೆ, ಆದ್ದರಿಂದ, ಅಂತಹ ಯಾವುದೇ ಪ್ರಯತ್ನಗಳನ್ನು ತಕ್ಷಣವೇ ನಿಲ್ಲಿಸಬೇಕು, ಇದರ ಬದಲಾಗಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ನಾವು ಸರ್ಕಾರಗಳನ್ನು ಒತ್ತಾಯಿಸುತ್ತೇವೆ.

4) ರಾಷ್ಟ್ರೀಯ ಶಿಕ್ಷಣ ನೀತಿ -2020 ಅನ್ನು ರದ್ದುಗೊಳಿಸಿ, ಆಯಾ ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸಬೇಕು ಮತ್ತು ಓಅಈ -2023 ಸೇರಿದಂತೆ NEP ಯ ಎಲ್ಲಾ ಅಂಶಗಳ ಅನುಷ್ಠಾನವನ್ನು ಕೂಡಲೇ ರದ್ದುಗೊಳಿಸಬೇಕು, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಿಟ್ಟುಕೊಂಡೆ ಈ ಪ್ರಕ್ರಿಯೆಯನ್ನು ಜಾರಿಗೊಳಿಸಬೇಕು.

5) ಕೊಠಾರಿ ಆಯೋಗವು ಶಿಕ್ಷಣ-ಕ್ಕಾಗಿ ಸರ್ಕಾರವು ಜಿಡಿಪಿಯಲ್ಲಿ ಕನಿಷ್ಠ 6% ರಷ್ಟನ್ನು ಖರ್ಚು ಮಾಡಬೇಕು ಎಂದಿದೆ, ಯಾವುದೇ ಸರ್ಕಾರವೂ ಇದುವರೆಗೂ ಇದನ್ನು ಅನುಷ್ಠಾನಗೊಳಿಸಿಲ್ಲ.

**ಉನ್ನತ ಶಿಕ್ಷಣ-**

1) NEET, CUET ಮತ್ತು ಎಇಇ ಮತ್ತು ಇತರ ಕೇಂದ್ರಿಕೃತ ಪ್ರವೇಶ ಪರೀಕ್ಷೆಗಳನ್ನು ರದ್ದುಪಡಿಸಬೇಕು



2) ದೇಶದ ಪ್ರತಿ ಜಿಲ್ಲೆಯಲ್ಲಿಯೂ ಕನಿಷ್ಠ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಬೇಕು

3) ವಿದೇಶಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಭಾರತದಲ್ಲಿ ಕ್ಯಾಂಪಸ್ ಗಳನ್ನು ಸ್ಥಾಪಿಸುವುದನ್ನು ನಿಷೇಧಿಸಬೇಕು

4) ಇನ್ನೂ ಮುಂದೆ ಸ್ಥಾಪಿಸಲಾಗುವ ಎಲ್ಲಾ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಮತ್ತು ಕೇಂದ್ರಿಯ ವಿಶ್ವವಿದ್ಯಾಲಯಗಳನ್ನು ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿಯೇ ಸ್ಥಾಪಿಸಬೇಕು

5) ಸಾಂಸ್ಥಿಕತಾರತಮ್ಯವನ್ನು (Institutional Discrimination) ಅನ್ನು ನಿರ್ಮೂಲನೆ ಮಾಡಲು ರೋಹಿತ್ ಕಾಯ್ದೆಯನ್ನು ಜಾರಿಗೊಳಿಸಬೇಕು.

**ಉದ್ಯೋಗ-**

1) ಸರ್ಕಾರಿ ವ್ಯವಸ್ಥೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು

2) ಸೇವಾ ಭದ್ರತೆ ಹೊಂದಿರುವ ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಎಲ್ಲಾ ಪ್ರಸ್ತಾಪಗಳನ್ನು ಸರ್ಕಾರ ತಕ್ಷಣವೇ ಹಿಂಪಡೆಯಬೇಕು

3) ಸಾಮಾಜಿಕ ವಲಯಕ್ಕಾಗಿ ಬಜೆಟ್ ನ ಕನಿಷ್ಠ 30% ಅನ್ನು ಮೀಸಲಿಡಬೇಕು, ಇದು ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸಲು ಅನುವು ಮಾಡಿಕೊಡುತ್ತದೆ.

ಈ ಸಂದರ್ಭದಲ್ಲಿ ಎಸ್.ಐ.ಓ(SIO) ಕರ್ನಾಟಕದ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಪೀರ್ ಲಟಗೇರಿ, ಎಸ್.ಐ.ಓ ಜಿಲ್ಲಾಧ್ಯಕ್ಷ ಮುಜಮ್ಮಿಲ್, ಇಳಕಲ್ ನಗರದ ಅಧ್ಯಕ್ಷರಾದ ಆಸಿಫ್ ಹುಣಚಗಿ, ದಲಿತ ವಿದ್ಯಾರ್ಥಿ ಪರಿಷತ್(DVP) ನ ಇಳಕಲ್ ನಗರದ ಅಧ್ಯಕ್ಷರಾದ ಸಿದ್ದಾರ್ಥ, ಎಸ್.ಐ.ಓ ಸ್ಥಾನೀಯ ಕಾರ್ಯದರ್ಶಿ ಉಸ್ಮಾನ್ ಗನಿ ಶೀವನಗುತ್ತಿ, ಸದಸ್ಯರಾದ ಅತಿಕ್ ಬಿಳೇಕುದ್ರಿ ಮತ್ತಿತರರು ಉಪಸ್ಥಿತರಿದ್ದರು.

**ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟದ ಭಾಗವಾಗಿರುವ ಸಂಘಟನೆಗಳು.**

1) ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಷನ್ ಆಫ್ ಇಂಡಿಯಾ, ಕರ್ನಾಟಕ (SIO)
2) ದಲಿತ ವಿದ್ಯಾರ್ಥಿ ಪರಿಷತ್ (DVP)
3) ಕರ್ನಾಟಕ ವಿದ್ಯಾರ್ಥಿ ಸಂಘಟನೆ (KVS)
4) ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (AISA)
5) ಅಂಬೇಡ್ಕರ್ ಸ್ಟೂಡೆಂಟ್ಸ್ ಅಸೋಸಿಯೇಷನ್, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು (ASA)





6) ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ, ಬೆಂಗಳೂರು ವಿಶ್ವವಿದ್ಯಾಲಯ (BU)
7) ಸ್ಟೂಡೆಂಟ್ಸ್ ಕ್ರಿಶ್ಚಿಯನ್ ಮೂವ್ಮೆಂಟ್ ಆಫ್ ಇಂಡಿಯಾ (SCMI)
8) ಸ್ಟೂಡೆಂಟ್ಸ್ ಫೆಡರೇಷನ್ ಫಾರ್ ಪೀಪಲ್ಸ್ ಡೆಮಾಕ್ರಸಿ (SFPD)
9) ಆಲ್ ಇಂಡಿಯಾ ಫೋರಮ್ ಫಾರ್ ರೈಟ್ ಟು ಎಜುಕೇಷನ್ (AIFRTE)

# ಕಾಂಗ್ರೆಸ್ ಪದಾಧಿಕಾರಿಗಳ ಆಯ್ಕೆ



**ಮುಧೋಳ :** ನಗರದ ಕಾಂಗ್ರೆಸ್ ಗೃಹ ಕಚೇರಿಯಲ್ಲಿ ಕಾಂಗ್ರೆಸ್ ಪದಾಧಿಕಾರಿಗಳಿಗೆ ಸನ್ಮಾನ ಮಾಡಲಾಯಿತು.

ಕರ್ನಾಟಕ ಸರಕಾರದ ಜಿಲ್ಲಾ ಉಸ್ತುವಾರಿ ಬಾಗಲಕೋಟೆ ಹಾಗೂ ಸಚಿವರಾದ ಆರ್.ಬಿ. ತಿಮ್ಮಾಪೂರರವರ ಸೂಚನೆ ಮೇರೆಗೆ ಮತ್ತು ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಎಸ್.ಜಿ. ನಂಜಯ್ಯನಮಠ ಅವರ ಅನುಮೋದನೆಯೊಂದಿಗೆ ಮುಧೋಳ ಮತ ಕ್ಷೇತ್ರದ ಮುಧೋಳ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳನ್ನಾಗಿ. ಲಾಲಸಾಬ ಕಾಶೀಮಸಾಬ ನದಾಫ ಮತ್ತು ಮುಧೋಳ ಮತ ಕ್ಷೇತ್ರದ ಲೋಕಾಪೂರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳನ್ನಾಗಿ. ವೆಂಕಪ್ಪ ತಿಮ್ಮಪ್ಪ ಹುಣಸಿಕಟ್ಟಿ ಹಾಗೂ ಸಂಗಪ್ಪ ಮಹಾದೇವಪ್ಪ ಅಮಾತಿಯವರನ್ನು ಮುಧೋಳ ತಾಲೂಕಿನ ಮುಧೋಳ ಬ್ಲಾಕ ಕ್ರಾಂಗೆಸ್ ಹಿಂದುಳಿದ ವರ್ಗಗಳ ಸಮಿತಿಯ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ. ಅಧಿಕಾರ ವಹಿಸಿಕೊಂಡು ತಾವುಗಳು ಕೂಡಲೆ ಪಕ್ಷದ ಸಂಘಟನೆ ಮತ್ತು ಬಲವರ್ಧನೆಗೆ ಕಾರ್ಯೋನ್ಮುಖರಾಗಿ ಎಂದು ಆದೇಶ ಪತ್ರಗಳನ್ನು ನೀಡಿದ ಅಬಕಾರಿ ಸಚಿವರು

ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್ ಬಿ ತಿಮ್ಮಾಪುರವರು ಮೂವರನ್ನು ಶಾಲು ಹೊದಿಸಿ ಹಾರ ಹಾಕಿ ಸನ್ಮಾನಿಸಿ ಶುಭ ಹಾರೈಸಿದರು.


ಈ ಸಂದರ್ಭದಲ್ಲಿ ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಶೋಕ ಕಿವಡಿ ಮತ್ತು ಕಾಂಗ್ರೆಸ್ ಹಿರಿಯರಾದ ಗೋವಿಂದಪ್ಪ ಗುಜ್ಜನ್ನವರ. ಉದಯ ಸಾರವಾಡ. ಮುದಕಣ್ಣ ಅಂಬಿಗೇರ. ಯೂಥ್ ಕಾಂಗ್ರೆಸ್ ಅಧ್ಯಕ್ಷರಾದ ಪ್ರವೀಣ್ ಪಾಟೀಲ. ಹಾಗೂ ಇನ್ನೂ ಮುಂತಾದ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

# ಜಮಖಂಡಿ ಇತಿಹಾಸ ಬರೆಯುವ ಕಾರ್ಯಕರ್ತರಾಗಿ: ಸಂಯುಕ್ತಾ

**ಜಮಖಂಡಿ :** ಕೇಂದ್ರದ ಮಾಜಿ ಸಚಿವ ದಿ.ಸಿದ್ದು ನ್ಯಾಮಗೌಡರು ಕಂಡಿದ್ದ ಕನಸುಗಳನ್ನು ನನಸು ಮಾಡುವುದೇ ನನ್ನ ಗುರಿಯಾಗಿದ್ದು, ರೈಲ್ವೇ ಯೋಜನೆ ಮೊದಲ ಆದ್ಯತೆ ನೀಡುತ್ತೇನೆ. ಐತಿಹಾಸಿಕ ಜಮಖಂಡಿ ಜನತೆ ಇತಿಹಾಸ ಬರೆಯುವ ಕಾರ್ಯಕರ್ತರಾಗಬೇಕು. ಇದು ನನ್ನ ಚುನಾವಣೆಯಲ್ಲ ಕನ್ನಡಿಗರ ಸ್ವಾಭಿಮಾನದ ಚುನಾವಣೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತ ಪಾಟೀಲ ಹೇಳಿದರು.

ನಗರದ ಬಸವಭವನದಲ್ಲಿ ಸಭಾಭವನದಲ್ಲಿ ರವಿವಾರ ನಡೆದ ಕಾಂಗ್ರೆಸ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಯಾವುದೇ ಹೇಳಿಕೊಳ್ಳುವಂತ ಕಾಮಗಾರಿಗಳಾಗಿಲ್ಲ. 20 ವರ್ಷದಿಂದ ಕುಡಚಿ ರೈಲು ಕಾಮಗಾರಿ ಕೇವಲ 36ಕಿ.ಮೀ. ಆಗಿದ್ದು ಆಮೆ ವೇಗದಲ್ಲಿದೆ. ಬಿಜೆಪಿ ಸರ್ಕಾರ ದೇಶದ ರೈತರ ಸಾಲಮನ್ನಾ ಮಾಡದೆ ಶ್ರೀಮಂತರ 14 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದು, ಬಿಜೆಪಿ ಜನರಿಗೆ ಕೇವಲ ಸುಳ್ಳು ಆಸ್ವಾಸನೆ ನೀಡುತ್ತದೆ ಎಂದರು.

ಬಡಕುಟುಂಬಗಳಿಗೆ ನೆರವಾದ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ಟೀಕೆ ಮಾಡಿದರು. ಬಡವರ ಕಷ್ಟ ಏನು ಎಂಬುವದು ಅರಿವು ಬಿಜೆಪಿ ನಾಯಕರಿಗಿಲ್ಲ. ಗೃಹಲಕ್ಷ್ಮಿ ಯೋಜನೆಯಿಂದ ಹಲವಾರು ಬಡ ಕುಟುಂಬಗಳಿಗೆ ಶಿಕ್ಷಣಕ್ಕೆ ಅನುಕೂಲವಾಗಿದ್ದು ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಪ್ರತಿ ಮಹಿಳೆಗೆ ವರ್ಷಕ್ಕೆ ಒಂದು ಲಕ್ಷ ರೂ. ನೀಡುವುದಾಗಿ ಗ್ಯಾರಂಟಿ ಭರವಸೆ ನೀಡಿದೆ. ಒಂದು ಅವಕಾಶ ಕೊಟ್ಟರೆ ನಿಮ್ಮ ಪಾಲಿನ ಧ್ವನಿಯಾಗಿ ನಾನು ಕೆಲಸ ಮಾಡುತ್ತೇನೆ ಎಂದರು.




## ಬಿಜೆಪಿ 200 ಸ್ಥಾನ ಗೆಲ್ಲುವದಿಲ್ಲ....

**ಈಸಲದ ಚುನಾವಣೆಯಲ್ಲಿ ಬಿಜೆಪಿ 200 ಸ್ಥಾನ ಗಳಿಸುವುದಿಲ್ಲ. ಅವರೇ ನಡೆಸಿದ ಆಂತರಿಕ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದ್ದು, ಹೀಗಾಗಿ ಅವರೆಲ್ಲರೂ ಆತಂಕದಲ್ಲಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ 20 ಸ್ಥಾನಗಳಲ್ಲಿ ಜಯ ಗಳಿಸಲಿದೆ. ಜಿಲ್ಲೆಯಲ್ಲಿ ಕಳೆದ 20 ವರ್ಷದಿಂದ ಕೇವಲ ರೈಲು ಕಾಮಗಾರಿ 36 ಕಿ.ಮೀ ಮುಗಿದಿದೆ. 100 ಕಿ.ಮೀ ಪೂರ್ಣಗೊಳ್ಳಲು ಇನ್ನೂ ಎಷ್ಟು ವರ್ಷಬೇಕಾಗಿದೆ ಸ್ವಾಮಿ. ಬಿಜೆಪಿ ಅಭ್ಯರ್ಥಿಗಳು ತಮ್ಮ ಹೆಸರಲ್ಲಿ ಮತ ಯಾಚನೆ ಮಾಡದೇ ಮೋದಿ ಹೆಸರಲ್ಲಿ ಮತಯಾಚಿಸುತ್ತಿದ್ದಾರೆ. ಇವರು ಅಪ್ಪಂದಿರಗೆ ಹುಟ್ಟಿಲ್ಲವೇ ಅವರಿಗೆ ಹೆಸರಿಲ್ಲವೆಂದು ಟೀಕಿಸಿದರು.**

◆ ಶಿವಾನಂದ ಪಾಟೀಲ, ಸಚಿವರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿ, ಸಂವಿಧಾನ ರಚನೆ ಮಾಡಿದ ಡಾ.ಅಂಬೇಡ್ಕರರು ಎಲ್ಲರಿಗೂ ಮತದಾನ ಮಾಡುವ ಅವಕಾಶ ನೀಡಿದ್ದು ಅದರ ಸದುಪಯೋಗ ಆಗಬೇಕು. ಗ್ಯಾರಂಟಿ ಯೋಜನೆಗಳು ರಾಜ್ಯದ ಜನತೆಯ ಕೈಹಿಡಿದಿವೆ. ಅಬ್ ಕಿ ಬಾರ್ ಚಾರ್ಸೋವ ಪಾರ್ ಎನ್ನುವ ಕೇಂದ್ರ ಸರ್ಕಾರ ದೋಸೌ ಪಾರ್ ಆಗೋದು ಕಠಿಣವಾಗಿದೆ. ಬರ ಪರಿಹಾರ ನೀಗಿಸದೇ ಕೇವಲ ರಾಮ ಮತ್ತು ಸೈನಿಕರ ಹೆಸರಲ್ಲಿ ಮತಯಾಚನೆ ಮಾಡುತ್ತಾರೆ. ನಮಗೂ ದೇಶಭಕ್ತಿ ಮತ್ತು ಕಾಳಜಿ ಇದೆ. ಈ ಸಲದ ಚುನಾವಣೆಯಲ್ಲಿ 20 ಸಾವಿರ ಮತಗಳ ಅಂತರದಿಂದ ಸಯುಂಕ್ತಾ ಪಾಟೀಲ ಗೆಲವು ಸಾಧಿಸಲಿದ್ದಾರೆ ಎಂದರು.

ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ಇದು ಸಂಯುಕ್ತ ಪಾಟೀಲ ಮತ್ತು ಪಿ.ಸಿ. ಗದ್ದಿಗೌಡರ ನಡುವಿನ ಚುನಾವಣೆಯಲ್ಲ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆ ಚುನಾವಣೆ. ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತರಲಿದ್ದು ಆತಂಕಕಾರಿ ಸಂಗತಿ. ಸಂಯುಕ್ತ ಪಾಟೀಲ ಅರ್ಹ ಅಭ್ಯರ್ಥಿ ಆಗಿದು ಕಾನೂನು ಪದವಿಧರರಿದ್ದಾರೆ. ಹಲವು ಭಾಷೆಗಳ ಜ್ಞಾನದ ಪ್ರಬುದ್ಧತೆ ಅವರಲ್ಲಿದೆ ಎಂದರು.

ವೇದಿಕೆಯಲ್ಲಿ ಎಸ್.ಜಿ.ನಂಜಯ್ಯನಮಠ, ಜೆ.ಟಿ.ಪಾಟೀಲ, ಕೆಪಿಸಿಸಿ ಉಪಾಧ್ಯಕ್ಷ ಅಜಯಕುಮಾರ ಸರನಾಯಕ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ವಿಧಾನ ಪರಿಷತ್ ಸದಸ್ಯ ಸುನಿಲಗೌಡ ಪಾಟೀಲ, ಹಿರಿಯ ಮುಖಂಡರಾದ ಶ್ರೀಶೈಲ ದಳವಾಯಿ, ಬಸವರಾಜ ಸಿಂಧೂರ, ಸಿದ್ದು ಕೊಣ್ಣೂರ, ಎನ್.ಎಸ್.ದೇವರವರ, ರಾಹುಲ ಕಲೂತಿ, ಮಾಮೂನ ಪಾರ್ಥನಳ್ಳಿ, ಸಿದ್ದು ಮೀಸಿ, ನಜೀರ ಕಂಗನೋಳ್ಳಿ ಸಹಿತ ಹಲವರು ಇದ್ದರು.

# ವಿಜಯಪುರ ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ 4 ಕೋಟಿ ಒಡೆಯಪತಿಗಿಂತ ಪತ್ನಿಯೇ ಶ್ರೀಮಂತೆ



**ವಿಜಯಪುರ :** ವಿಜಯಪುರ ಎಸ್.ಸಿ. ಮೀಸಲು ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ಅವರು ನಾಲ್ಕು ಕೋಟಿಗಿಂತ ಹೆಚ್ಚು ಶ್ರೀಮಂತರಾಗಿದ್ದಾರೆ. ಆಲಗೂರ ಅವರಿಗಿಂತಲೂ ಅವರ ಪತ್ನಿ ಹೆಚ್ಚು ಶ್ರೀಮಂತರಾಗಿದ್ದಾರೆ.

ರಾಜು ಆಲಗೂರ ಅವರು ನಾಮಪತ್ರ ಸಲ್ಲಿಸುವ ವೇಳೆ ಚುನಾವಣೆ ಆಯೋಗಕ್ಕೆ ತಮ್ಮ ಆಸ್ತಿ ವಿವರ ಘೋಷಣೆ ಮಾಡಿದ್ದು, ರಾಜು ಆಲಗೂರ ಅವರ ಪತ್ನಿ ಪತಿಗಿಂತ ಎರಡು ಕೋಟಿ ಹೆಚ್ಚು ಶ್ರೀಮಂತೆ ಆಗಿದ್ದಾರೆ.

ಅಭ್ಯರ್ಥಿ ರಾಜು ಆಲಗೂರ ಆವರ ಹೆಸರಿನಲ್ಲಿ 5 ಲಕ್ಷ ನಗದು, ಬ್ಯಾಂಕ್ ಠೇವಣಿ, ಹೂಡಿಕೆ, ಎರಡು ವಾಹನ, 5.84 ಲಕ್ಷ ರೂ. ಮೌಲ್ಯದ 80 ಗ್ರಾಂ ಚಿನ್ನಾಭರಣ ಸೇರಿದಂತೆ 91,74,326 ರೂ. ಮೌಲ್ಯದ ಚರಾಸ್ಥಿ ಹೊಂದಿದ್ದಾರೆ. ಕೃಷಿ ಭೂಮಿ, ಕೃಷಿಯೇತರ ಭೂಮಿ, ನಿವೇಶನ, ಮನೆ, ವಾಣಿಜ್ಯ ಕಟ್ಟಡ ಒಳಗೊಂಡಂತೆ ಒಟ್ಟು 4,54,87,500 ರೂ. ಮೌಲ್ಯದ ಸ್ಥಿರಾಸ್ಥಿ ಇದೆ.

ಪತ್ನಿ ಸಾವಿತ್ರಿ ಹನಮಂತರಾವ ಆಲಗೂರ ಹೆಸರಿನಲ್ಲಿ 2 ಲಕ್ಷ ನಗದು, ಹೂಡಿಕೆ, ಠೇವಣಿ,

ಮೂರು ವಾಹನ, 230 ಗ್ರಾಂ ಚಿನ್ನ (16.79 ಲಕ್ಷ) ಸೇರಿದಂತೆ 1,67,80,894 ಮೌಲ್ಯದ ಚರಾಸ್ಥಿ ಹೊಂದಿದ್ದಾರೆ.

ಕೃಷಿ ಭೂಮಿ, ಕೃಷಿಯೇತರ ಭೂಮಿ, ನಿವೇಶನ, ಹೋಟೇಲ್ ಸೇರಿದಂತೆ ಒಟ್ಟು 6,85,25,000 ರೂ. ಮೌಲ್ಯದ ಸ್ಥಿರಾಸ್ಥಿ ಇದೆ.

# ನೇಕಾರರಿಗೆ ಕಾಂಗ್ರೆಸ್ ಶ್ರೀರಕ್ಷೆ– ರವೀಂದ್ರ ಕಲಬುರ್ಗಿ

**ಚಿಮ್ಮಡ :** ನೇಕಾರರಿಗೆ ಕಾಂಗ್ರೆಸ್ ಪಕ್ಷ ನೀಡಿದಷ್ಟು ಸೌಲಭ್ಯಗಳನ್ನು ಇತಿಹಾಸದಲ್ಲಿ ಬೇರಾವ ಪಕ್ಷವೂ ನೀಡಿಲ್ಲವೆಂದು ನೇಕಾರರ ಒಕ್ಕೂಟದ ಜಿಲ್ಲಾಧ್ಯಕ್ಷ ರವೀಂದ್ರ ಕಲಬುರ್ಗಿ ಹೇಳಿದರು.

ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ನೇಕಾರರ ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಆಗಮಿಸಿ ಮಾತನಾಡಿದ ಅವರು ಕಾಂಗ್ರೆಸ್ ಸರಕಾರ ರಾಜ್ಯದ ಜನರಿಗಾಗಿ ಘೋಷಣೆ ಮಾಡಿದಂತೆ ಐದು ಗ್ಯಾರಂಟಿಗಳನ್ನು ಜಾರಿಗೆ ತರುವ ಮೂಲಕ ಹೇಳಿದಂತೆ ನಡೆದುಕೊಂಡಿದೆ, ನೇಕಾರರ ವಿದ್ಯುತ್ ಮಗ್ಗಗಳಿಗೂ ಉಚಿತ ವಿದ್ಯುತ್ ನೀಡುತ್ತಿದೆ



ಅಲ್ಲದೇ ನೇಕಾರ ಸಮ್ಮಾನ ಯೋಜನೆಯಡಿ ಐದು ಸಾವಿರ ರೂ. ನೀಡುತ್ತಿದೆ. ಇಂಥ–'ಹ ಹಲವಾರು ಯೋಜನೆಗಳ ಮೂಲಕ ಬಡವರಿಗೆ, ನೇಕಾರರಿಗೆ ಶ್ರೀರಕ್ಷೆಯಾಗಿರುವ ಪಕ್ಷಕ್ಕೆ ಪ್ರಸಕ್ತ ಸಾಲಿನ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಅವರಿಗೆ ಮತವನ್ನು ನೀಡುವ ಮೂಲಕ ಬೆಂಬಲಿಸಬೇಕಾಗಿದೆ ಎಂದರು. ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ ಮಾತನಾಡಿ ಕಾಂಗ್ರೆಸ್ ಪಕ್ಷ ಬದ್ದತೆಗೆ ಹೆಸರಾಗಿದೆ ಸಚಿವ ಶಿವಾನಂದ ಪಾಟೀಲರು ನೇಕಾರರ ಕುರಿತ ಕಳಕಳಿ ಹೊಂದಿದವರಾಗಿದ್ದು ಅಂಥ–'ವರನ್ನು ಬೆಂಬಲಿಸಿದಲ್ಲಿ ಬಡ ನೇಕಾರರಿಗೆ ಅನುಕೂಲವಾಗಲಿದೆ ಎಂದರು..

ನೇಕಾರರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಸಂಗಪ್ಪ ಹಳ್ಳೂರ. ಅಶೋಕ ಧಡೂತಿ, ಚಂದ್ರಕಾಂತ ಜಾಡಗೌಡ, ಪಿಕೆಪಿಎಸ್ ನಿರ್ದೇಶಕ ಚನ್ನಪ್ಪಾ ಬಿಳ್ಳೂರ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಪಿರಸಾಬ ನದಾಫ, ಚನಮಲ್ಲಪ್ಪಾ ವಿಜಾಪೂರ ಇಮಾಮ ಯಾದವಾಡ, ಮಹಾದೇವ ಅಥಣಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

# ವಿಶ್ವದ ಚಿತ್ತ – ಅಯೋಧ್ಯೆಯ ಬಾಲರಾಮನತ್ತ

**ರಾಮಾಯ ರಾಮ ಭದ್ರಾಯ**
**ರಾಮಚಂದ್ರಾಯ ವೇಧಸೇ**
**ರಘುನಾಥಾಯ ನಾಥಾಯ**
**ಸೀತಾಯಃ ಪತಯೇ ನಮಃ**
**ಆ ರಾಮ ಜಾನಕಿನಾಥ ತಾಟಕಾಸುರಿ ಮರ್ದನ**
**ಇಕ್ಷ್ವಾಕು ಕುಲಸಂಭುತ ರಣಪಂಡಿತ ರಾಘವ॥**

**ರಾಮ** ಬಂದಾನೋ ಬಾಲ ರಾಮ ಬಂದಾನೊ. ಈ ವರ್ಷದ ರಾಮನವಮಿ ಬಹಳ ವಿಶೇಷವಾಗಿದೆ. ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನಂತರದ ಮೊದಲ ರಾಮನವಮಿ ಇದಾಗಿದ್ದು, ವಿಶ್ವದ ಚಿತ್ತವೇ ಅಯೋಧ್ಯೆಯ ಬಾಲರಾಮ ಮಂದಿರದತ್ತ ನೆಟ್ಟಿದೆ. ಇಂದೇ ರಾಮನವಮಿಯಂದು ಬಾಲ ರಾಮನ ವಿಗ್ರಹದ ಮೇಲೆ ಸೂರ್ಯರಶ್ಮಿಯು (ಸೂರ್ಯ ತಿಲಕ್) ಸುಮಾರು ಎರಡುವರೆ ನಿಮಿಷಗಳ ಕಾಲ ಬೀಳಲಿದೆ. ಜಗತ್ತಿನಾದ್ಯಾಂತ ಜನರು ಈ ಸೂರ್ಯಾಭಿಷೇಕ ದೃಶ್ಯವನ್ನು ಕಣ್ತುಂಬಿಕೊಳ್ಳಲು ಕಾಯುತ್ತಿದ್ದಾರೆ. ಈ ಘಟನೆಯು ಮುಂದಿನ 100 ವರ್ಷಗಳವರೆಗೆ ಪ್ರತಿ ರಾಮನವಮಿಗೆ ಸ್ವಯಂ ಟ್ಯೂನ್ ಮಾಡಲಾದ ಕಾರ್ಯವಿಧಾನಗಳನ್ನು ಸಾಧಿಸುವ ಉದ್ದೇಶ ಹೊಂದಿದೆ. ಅಯೋಧ್ಯೆಯಿಂದ ವಿಶ್ವದಾದ್ಯಂತ ದೂರದರ್ಶನದ ಮುಖಾಂತರ ರಾಮನವಮಿಯ ನೇರಪ್ರಸಾರವನ್ನು ಮಾಡಲಾಗುತ್ತದೆ. ಬೆಂಗಳೂರಿನ ಇನ್ಸ್ಟ್ಯೂಟ್ ಆಫ್ ಆಸ್ಟ್ರೋ ಫಿಸಿಕ್ಸ್ ಇವರು ಪ್ರಾಚೀನ ವಾಸ್ತುಶಾಸ್ತ್ರದೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿ ಮೂರು ಕನ್ನಡಿಯ ಸಹಾಯದೊಂದಿಗೆ ಸೂರ್ಯನ ಕಿರಣ ಸರಿಯಾಗಿ ಬಾಲರಾಮನನ್ನು ಸ್ಪರ್ಶಿಸುವಂತೆ ಮಾಡಲಿದ್ದಾರೆ. ಇದನ್ನು ನೋಡಲು ವಿಶ್ವವೇ ಕಾತುರವಾಗಿದೆ.

ಪ್ರತಿ ವರ್ಷ ರಾಮ ನವಮಿಯನ್ನು ಚೈತ್ರ ಮಾಸದ ಶುಕ್ಲ ಪಕ್ಷದ ಒಂಬತ್ತನೇ ದಿನದಂದು ಆಚರಿಸಲಾಗುತ್ತದೆ. ಶ್ರೀರಾಮನು ಚೈತ್ರ ಮಾಸದ ಶುಕ್ಲ ಪಕ್ಷದ ಒಂಬತ್ತನೇ ದಿನದಂದು ಮಾನವ ರೂಪದಲ್ಲಿ ಅವತರಿಸಿದನೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ರಾಮನ ಜನ್ಮದ ಕುರಿತು ಸಂಕ್ಷಿಪ್ತವಾಗಿ ತಿಳಿಯುವುದಾದರೆ, ಅಯೋಧ್ಯೆಯ ರಾಜ ದಶರಥನಿಗೆ ಕೌಸಲ್ಯ, ಸುಮಿತ್ರ ಮತ್ತು ಕೈಕೇಯಿ ಎಂಬ ಮೂವರು ರಾಣಿಯರಿದ್ದರು. ವಿವಾಹವಾಗಿ ವರ್ಷಗಳು ಕಳೆದರೂ ಇವರಿಗೆ ಮಕ್ಕಳ ಭಾಗ್ಯ ದೊರೆಯಲಿಲ್ಲ. ಋಷಿ ವಸಿಷ್ಠರ ಸೂಚನೆಯ ಮೇರೆಗೆ ದಶರಥನು "ಪುತ್ರಕಾಮೇಷ್ಟಿ ಯಜ್ಞ" ವನ್ನು ಮಾಡಿದನು, ತನ್ನ ಮೂವರು ಹೆಂಡತಿಯರಿಗೆ ಮಗುವನ್ನು ಹೊಂದುವ ಬಯಕೆಯನ್ನು ಈಡೇರಿಸಲು 'ಪಾಯಸ" ಬಡಿಸಿದನು. ಪರಿಣಾಮವಾಗಿ ರಾಣಿ ಕೌಸಲ್ಯೆಯು ರಾಮನಿಗೆ ಜನ್ಮ ನೀಡಿದಳು, ಕೈಕೇಯೀ ಭರತನಿಗೆ, ಸುಮಿತ್ರ ಲಕ್ಷ್ಮಣ ಮತ್ತು ಶತ್ರುಘ್ನ ಎಂಬ ಅವಳಿ ಮಕ್ಕಳಿಗೆ ಜನ್ಮ ನೀಡಿದಳು. ರಾಮನು ಹುಟ್ಟಿದ ದಿನವನ್ನು "ರಾಮನವಮಿ"ಯೆಂದು ಆಚರಿಸಲಾಗುತ್ತದೆ.

ಎಲ್ಲಾ ಭಾರತೀಯರು ಆಚರಿಸುವ ಐದು ಪ್ರಮುಖ



ಹಬ್ಬಗಳಲ್ಲಿ ರಾಮನವಮಿ ಕೂಡ ಒಂದಾಗಿದೆ. ಆದರ್ಶವಾದಿ ರಾಮನು ಸಮಾಜದಲ್ಲಿ ನೀತಿಯುತ ಜೀವನವನ್ನು ನಡೆಸಿದ್ದಾನೆ. ಎಷ್ಟೆಲ್ಲ ಸಮಸ್ಯೆಗಳು ಬಂದರೂ ಧರ್ಮ ಮಾರ್ಗವನ್ನು ಬಿಡಲಿಲ್ಲ. ತ್ರೇತಾಯುಗದಲ್ಲಿ ರಾಣಿ ಕೈಕೇಯಿ ರಾಜ ದಶರಥನಿಂದ ವರಗಳನ್ನು ಕೇಳಿದ್ದಳು. ಅದೇನೆಂದರೆ ತನ್ನ ಮಗ ಭರತನನ್ನು ಅಯೋಧ್ಯೆಯ ಯುವರಾಜನನ್ನಾಗಿ ಮಾಡುವುದು. ಹಾಗೆಯೇ ರಾಮನನ್ನು ಹದಿನಾಲ್ಕು ವರುಷ ವನವಾಸಕ್ಕೆ ಕಳುಹಿಸುವುದು. ತಂದೆ ತಾಯಿಯರ ಮಾತಿಗೊಪ್ಪಿ ರಾಮ ವನವಾಸಕ್ಕೆ ಹೋಗಿ ಆದರ್ಶ ಪುತ್ರ ಎನಿಸಿಕೊಂಡನು. ವನವಾಸದಲ್ಲಿ ಮಾನವೀಯತೆಯನ್ನು ಮೆರೆದು ಅಹಲ್ಯೆ ಮತ್ತು ಶಬರಿಯನ್ನು ಉದ್ದರಿಸಿದನು. ತಾಟಕಿ ಮುಂತಾದ ರಾಕ್ಷಸರನ್ನು ಸಂಹರಿಸಿದನು. ಅಪಹರಣಕ್ಕೊಳಗಾಗಿದ್ದ ಸೀತೆಯನ್ನು ರಾವಣನ ಮುಷ್ಟಿಯಿಂದ ಬಿಡಿಸಿಕೊಂಡು ಬಂದನು. ಪ್ರಚಂಡ ಬಲಶಾಲಿ ದಶಾನನ ರಾವಣನನ್ನು ಸಂಹರಿಸಿ ಆದರ್ಶ ಪುರುಷನೆನಿಸಿಕೊಂಡನು. ಜೀವನದಲ್ಲಿ ಬಂದ ಎಲ್ಲಾ ಸಂಕಷ್ಟಗಳನ್ನು ಎದುರಿಸಿ ಮರ್ಯಾದ ಪುರುಷೋತ್ತಮ ರಾಮನೆನಿಸಿಕೊಂಡನು. ಹದಿನಾಲ್ಕು ವರ್ಷಗಳ ವನವಾಸವನ್ನು ರಾಮನು ಮುಗಿಸಿಕೊಂಡು ಬರುವುದನ್ನು ಅಯೋಧ್ಯೆಯ ವಾಸಿಗಳು ತ್ರೇತಾಯುಗದಲ್ಲಿ ಕಾಯುತ್ತಿದ್ದರು. ಕಲಿಯುಗದಲ್ಲಿ ನಾವು ರಾಮನನ್ನು ಅಯೋಧ್ಯೆಗೆ ಹಿಂದಿರುಗಿ ಕರೆತರಲು ಐನೂರಕ್ಕೂ ಹೆಚ್ಚು ವರ್ಷ ಕಾಯಬೇಕಾಯಿತು. ಈ ವರ್ಷದ ರಾಮನವಮಿ ವಿಶೇಷವಾಗಿದೆ ಏಕೆಂದರೆ ಬಾಲರಾಮ ಈಗ ಟೆಂಟ್ನಲ್ಲಿಲ್ಲ. ಭವ್ಯವಾದ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಗೊಂಡಿದ್ದಾನೆ. ಪ್ರತಿಯೊಬ್ಬ ಹಿಂದೂ ಕೂಡ ಬಾಲರಾಮನನ್ನು ಕಂಡು ಭಾವಪರವಶನಾಗಿದ್ದಾನೆ. ಸರ್ವರಿಂದ ಪೂಜಿಸಲ್ಪಡುವ ಶ್ರೀರಾಮನು ಬಾಲ ರಾಮನಾಗಿ ತನ್ನ ಜನ್ಮಸ್ಥಳವಾದ ಅಯೋಧ್ಯೆಯಲ್ಲಿ ಬಂದು ನೆಲೆಸಿದ್ದಾನೆ. ಇಡೀ ರಾಮಾಯಣವನ್ನು ಕೇವಲ ಒಂದು ಶ್ಲೋಕದಲ್ಲಿ ಪಠಿಸಿ ಮಕ್ಕಳಿಗೆ ರಾಮನ ಬಗ್ಗೆ ತಿಳಿಸಲಾಗುತ್ತದೆ. ಅದೇನೆಂದರೆ

**ಆದೌ ರಾಮ ತಪೋವನಾಭಿಗಮನಂ ಹತ್ವಾ ಮೃಗಂ ಕಾಂಚನಂ।**
**ವೈದೇಹೀ ಹರಣಂ ಜಟಾಯು ಮರಣಂ ಸುಗ್ರೀವ ಸಂಭಾಷಣಂ॥**
**ವಾಲಿನಿರ್ಹನನಂ ಸಮುದ್ರ ತರಣಂ ಲಂಕಾಪುರೀ ದಾಹನಂ॥**

ರಾಮನ ಜೀವನವೇ ಒಂದು ಆದರ್ಶಮಯ ಎಂಬುದು ಎಲ್ಲರಿಗೂ ತಿಳಿದಿರುವಂತಹ ವಿಷಯ. ಬಡವರು ಬಲ್ಲಿದರು, ಮೇಲ್ವರ್ಗದವರು ಕೇಳವರ್ಗದವರು ಎನ್ನುವ ಯಾವುದೇ ಭೇದಭಾವವಿಲ್ಲದೆ ಎಲ್ಲರನ್ನು ಗೌರವಿಸಿದ ಮಹಾನ್ ವ್ಯಕ್ತಿತ್ವ ಆತನದು. ಆತನ ಸನ್ನಡತೆಯು ಅನುಕರಣೀಯವಾದದ್ದು. ರಾಮನ ಕಥೆಯನ್ನು ವಾಲ್ಮೀಕಿ ಬರೆದರೆ, ರಾಮನ ಸೇನೆಯು ವಾನರದಾಗಿತ್ತು. ಆರ್ಯ ದ್ರಾವಿಡ ಎಂಬ ಯಾವುದೇ ಭೇದ ಭಾವಗಳಿಲ್ಲದೆ, ಪಶು ಪಕ್ಷಿಗಳನ್ನು ತನ್ನ ಸ್ನೇಹಿತರು ಮತ್ತು ಸಹಚರರನ್ನಾಗಿ ಮಾಡಿಕೊಂಡ ರಾಮನನ್ನು ವಿಶ್ವದ ಎಲ್ಲಾ ಜನರು ದೇವರೆಂದು ಪೂಜಿಸಿದರು.

ರಾಮ ನವಮಿಯಂದು ಜಗನ್ಮಾತೆಯಾದ ಆದಿಶಕ್ತಿ ದುರ್ಗೆಯ ಒಂಬತ್ತನೇ ಶಕ್ತಿಯಾದ ಸಿದ್ಧಿದಾತ್ರಿಯನ್ನೂ ಪೂಜಿಸಲಾಗುತ್ತದೆ. ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನು ಮಧ್ಯಾಹ್ನ ಪೂಜಿಸಲಾಗುತ್ತದೆ. ಶಿವನು ಪಾರ್ವತಿಗೆ ಹೇಳಿದ ಶ್ಲೋಕವನ್ನು ಪಠಿಸಲಾಗುತ್ತದೆ. ಅದೇನೆಂದರೆ

**ಶ್ರೀ ರಾಮ ರಾಮ ರಾಮೇತಿ**
**ರಮೇ ರಾಮೇ ಮನೋರಮೇ**
**ಸಹಸ್ರ ನಾಮ ತತ್ ತುಲ್ಯಂ**
**ರಾಮ ನಾಮ ವರಾನನೇ ॥**

ನಾನು ಶ್ರೀರಾಮನನ್ನು ಶ್ರೀರಾಮ ರಾಮ ರಾಮ ಎಂದು ಧ್ಯಾನಿಸುತ್ತೇನೆ, ಮೂರು ಬಾರಿ ರಾಮನ ನಾಮಸ್ಮರಣೆಯು ವಿಷ್ಣುವಿನ ಸಾವಿರ ನಾಮಗಳ ಪಠಣಕ್ಕೆ ಸಮಾನವಾಗಿದೆ (ವಿಷ್ಣು ಸಹಸ್ರನಾಮ) ಎಂದು ಶಿವನು ಪಾರ್ವತಿಗೆ ಹೇಳುತ್ತಾನೆ ಎಂಬ ಉಲ್ಲೇಖವಿದೆ.

ಶ್ರೀರಾಮನನ್ನು ಆರಾಧಿಸುವುದರಿಂದ, ಮನುಷ್ಯನ ಜೀವನದಲ್ಲಿ ಸಾಮಾನ್ಯವಾಗಿ ಎದುರಾಗುವ ದುಃಖ ಮತ್ತು ತೊಂದರೆಗಳು ಶಾಶ್ವತವಾಗಿ ದೂರವಾಗುತ್ತವೆಂಬ ಧಾರ್ಮಿಕ ನಂಬಿಕೆ ಇದೆ. ರಾಮನವಮಿಯಂದು ಶುಚಿರ್ಭೂತರಾಗಿ, ಮನೆಯ ಮುಖ್ಯ ದ್ವಾರಕ್ಕೆ ಮಾವಿನ ಎಲೆಯ



ತೋರಣ ಕಟ್ಟಿ. ಅಂಗಳದಲ್ಲಿ ಬಣ್ಣದ ರಂಗೋಲಿ ಹಾಕಿ ಸಿಂಗಾರಗೊಳಿಸಲಾಗುತ್ತದೆ. ಹೊಸ ಹಳದಿ ಬಣ್ಣದ ಬಟ್ಟೆಗಳನ್ನು ಧರಿಸಲಾಗುತ್ತದೆ. ರಾಮನನ್ನು ಸೀತಾ ಲಕ್ಷ್ಮಣ ಮತ್ತು ಹನುಮಂತನ ಸಮೇತ ಪೂಜಿಸಿ, ಕೊಸಂಬರಿ ಮತ್ತು ಪಾನಕವನ್ನು ನೈವೇದ್ಯ ಮಾಡಲಾಗುತ್ತದೆ. ಅಂದು ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಲಂಕಾರ, ಸೇವೆಗಳು ಸಹ ಇರುತ್ತವೆ. ಭಕ್ತರಿಗೆ ಪಾನಕ ಮತ್ತು ಕೊಸಂಬರಿ ವಿತರಿಸಲಾಗುತ್ತದೆ. ರಾಮ ಚಾಲೀಸ, ರಾಮಾ ರಕ್ಷಾ ಸ್ತೋತ್ರ ಪಠಿಸಲಾಗುತ್ತದೆ. ರಾಮನಿಗೆ ಆರತಿ ಮಾಡುವುದರೊಂದಿಗೆ ಸುಖ, ಸಂತೋಷ, ಸಮೃದ್ಧಿ ಮತ್ತು ಸಂಪತ್ತಿನ ಹೆಚ್ಚಳಕ್ಕಾಗಿ ಪ್ರಾರ್ಥಿಸಲಾಗುತ್ತದೆ. ಈ ಸಲ ಅಯೋಧ್ಯೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ರಾಮನವಮಿ ಆಚರಿಸಲಾಗುತ್ತಿದೆ.

ರಾಮನು ಹುಟ್ಟಿದ ಸ್ಥಳದಲ್ಲಿ ಆತನಿಗೆ ಇಷ್ಟು ವರ್ಷ ಒಂದು ನಿವಾಸ ಇರಲಿಲ್ಲ. ರಾಮನಿಗೆ ಮಂದಿರ ನಿರ್ಮಿಸುವ ವಿಷಯ ತಿಳಿದ ಪ್ರತಿಯೊಬ್ಬ ಭಾರತೀಯನು 48 ಗಂಟೆಗಳ ಅವಧಿಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ದಾನವಾಗಿ ನೀಡಿದರು. ಅಲ್ಪ ಸಮಾಯದಲ್ಲಿ ಅಪಾರ ಹಣ, ಮತ್ತು ವಸ್ತು ಸಂಗ್ರಹವನ್ನು ಕಂಡು ವಿದೇಶಿಯರೇ ಚಕಿತಗೊಂಡರು. ಬಡ ಕೂಲಿ ಕಾರ್ಮಿಕರಿಂದ ಹಿಡಿದು ಸಾಮಾನ್ಯ ಮಧ್ಯಮ ವರ್ಗದವರು ಸಹ ತಮ್ಮ ಅನುಕೂಲಕ್ಕೆ ತಕ್ಕಂತೆ ದೇಣಿಗೆಯನ್ನು ನೀಡುವುದರ ಮುಖಾಂತರ ರಾಮಮಂದಿರ ಕಟ್ಟುವಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಯೋಧ್ಯೆಯ. ರಾಮ ಮಂದಿರ ಇಡೀ ಭಾರತೀಯರದ್ದು ಎಂಬುದನ್ನು ಇಲ್ಲಿನ ಜನ ಸಾಬೀತು ಮಾಡಿದ್ದಾರೆ. ಅಂದು ಸುಪ್ರೀಂ ಕೋರ್ಟ್ ತೀರ್ಪು ಬಂದಾಗ ಪ್ರತಿಯೊಬ್ಬ ಹಿಂದೂ ತಮ್ಮ ಕೈಲಾದಷ್ಟು ದೇಣಿಗೆಯನ್ನು ನೀಡಿ ತಮ್ಮ ಇಷ್ಟ ದೇವರಾದ ರಾಮನನ್ನು ಅಯೋಧ್ಯೆಯ ಮಂದಿರದಲ್ಲಿ ಪುನರ್ ಸ್ಥಾಪಿಸಲು ಕಂಕಣ ತೊಟ್ಟಿದ್ದರು. ಇಂದು ಅಯೋಧ್ಯೆಯ ಮಂದಿರದಲ್ಲಿ ಬಾಲರಾಮ ಬಂದು ನೆಲೆಸಿದ್ದಾನೆ. ಈ ಮಂದಿರ ಕಟ್ಟುವಲ್ಲಿ ಪ್ರತಿಯೊಬ್ಬ ಭಾರತೀಯನು ತನ್ನದೇ ಆದಂತ ವಿಶಿಷ್ಟ ಕೊಡುಗೆಯನ್ನು ನೀಡಿ ಕೃತಾರ್ಥನಾಗಿದ್ದಾನೆ. ರಾಮ ಕೇವಲ ಒಬ್ಬ ವ್ಯಕ್ತಿಯಲ್ಲ. ಭಾರತೀಯರ ಆರಾಧ್ಯ ದೈವವೆಂದು ಜಗವೇ ಇಂದು ಕೊಂಡಾಡುತ್ತಿದೆ.

ಗಾಂಧೀಜಿಯವರು ಕಂಡ ರಾಮ ರಾಜ್ಯದ ಕನಸು ನನಸಾಗಲಿ. ರಾಮನು ತನ್ನ ಜನ್ಮಸ್ಥಳದಲ್ಲಿ ಇಂದು ನೆಲೆಸಿದ್ದಾನೆ. ಭವದ ದುಃಖಗಳು, ನೋವು ನಿರಾಸೆಗಳು, ಹತಾಶೆಗಳು ಕೊನೆಗೊಂಡು ಸುಖ ಸಂತೋಷ ಸಮೃದ್ಧಿ ಆಯಸ್ಸು ಆರೋಗ್ಯ ಎಲ್ಲರಿಗೂ ದೊರೆಯಲಿ. ಭಾರತ ವಿಶ್ವದ ಗುರುವಾಗಲಿಯೆಂದು

**ನೀಲಾಂಬುಜ ಶ್ಯಾಮಲ ಕೋಮಲಾಂಗಂ**
**ಸೀತಾ–ಸಮಾರೋಪಿತ ವಾಮಭಾಗಂ**
**ಪಾಣೌ–ಮಹಾ–ಸಾಯಕ ಚಾರು–ಚಾಪಂ**
**ನಮಾಮಿ ರಾಮಂ ರಘು–ವಂಶ ನಾಥಮ್**

ನೀಲಿ ಕಮಲದಂತಹ ಮೈಬಣ್ಣ ಮತ್ತು ಮೃದುತ್ವವುಳ್ಳವನೂ, ಎಡಭಾಗದಲ್ಲಿ ಸೀತೆಯನ್ನು ಕುಳ್ಳಿರಿಸಿಕೊಂಡಿರುವವನೂ ತನ್ನ ದೊಡ್ಡ ಬಿಲ್ಲು ಬಾಣಗಳನ್ನು ಪ್ರಯೋಗಿಸುವವನೂ, ರಘುಕುಲದ ಶ್ರೇಷ್ಠ ರಾಜರಲ್ಲಿ ಶ್ರೇಷ್ಠನೂ ಆದ ಶ್ರೀರಾಮನಿಗೆ ನಾನು ನಮಸ್ಕಾರಗಳನ್ನು ಮಾಡುತ್ತೇನೆ. ಎಲ್ಲರಿಗೂ ರಾಮನವಮಿಯ ಶುಭಾಶಯಗಳು.

* * *



ಲತಾ ಕೆ.ಎಸ್.ಹೆಗಡೆ
ಬೆಂಗಳೂರು

# ಮುಕ್ತ ಅವಕಾಶದೊಂದಿಗೆ ಶೈಕ್ಷಣಿಕ ಜೀವನ

ವಿದ್ಯಾರ್ಥಿಗಳ ಶೈಕ್ಷಣಿಕ ಜೀವನ ಪಯಣದಲ್ಲಿ ಪ್ರೌಢ ಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣದ ಮೈಲುಗಲ್ಲುಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ . ಆದ್ದರಿಂದ ಈ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಹಂತಗಳನ್ನು ಮುಗಿಸಿದ ವಿದ್ಯಾರ್ಥಿಗಳ ಮುಂದಿನ ಓದಿಗಾಗಿ ತಮ್ಮ ಅವಗಾಹನಕ್ಕೆ ಈ ಲೇಖನ .ಉತ್ತೀರ್ಣರಾದ ಮಕ್ಕಳು ಮುಂದೆ ಏನು?ಯಾವ ? ಕಲಿಕಾ ತರಗತಿಗಳು (ಕೋರ್ಸ್ಗಳು) ಸೇರಬೇಕು ಎಂಬುದರ ಗೊಂದಲಗಳು ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ ಪಾಲಕ ಬಂಧುಗಳಲ್ಲಿಯೂ ಕೂಡಾ ಕಾಡುವಂತಹ ದೊಡ್ಡ ಪ್ರಶ್ನೆಯಾಗಿದೆ.ಹಾಗಾಗಿ ನಾವು ಆಯ್ಕೆ ಮಾಡುವ ಕೋರ್ಸ್ಗಳು ಹೇಗೆ ? ನಮ್ಮ ಭವಿಷ್ಯವನ್ನು ರೂಪಿಸುವವು , ಇದರಿಂದ ನಾವು ಹೇಗೆ ಸಂತೃಪ್ತ ಜೀವನ ಸಾಗಿದಬಹುದು ಎಂಬುದನ್ನು ಮೊದಲೇ ಯೋಜಿಸಿಕೊಂಡು ಮುಂದಿನ ಓದಿಗೆ ಅಣಿಯಾಗಬೇಕು. ಇದರಲ್ಲಿ ವಿದ್ಯಾರ್ಥಿಗಳ ಆಸಕ್ತಿ, ಬುದ್ಧಿಮತ್ತೆ, ದೃಢತೆ ಹಾಗೂ ನಿರ್ಧಾರಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಗೆಯೇ ಪಾಲಕರ ಮಾರ್ಗದರ್ಶನ, ಪ್ರೋತ್ಸಾಹ, ಆತ್ಮಸ್ಥೈರ್ಯ ತುಂಬುವ ಕಾರ್ಯವು ಕೂಡ ಶೈಕ್ಷಣಿಕ ಕೊಂಡಿಯನ್ನು ಜೋಡಿಸುವ ವ್ಯವಸ್ಥೆಯಾಗಿದೆ. ಆದ್ದರಿಂದ ಪ್ರತಿ ಶೈಕ್ಷಣಿಕ ಹಂತದ ಆಯ್ಕೆಯು ಈ ಇಬ್ಬರ ಸಮ್ಮಿಳಿತ ಯೋಚನೆಗಳಿಂದ ಕೂಡಿದ್ದರೆ ಮಕ್ಕಳ ಶೈಕ್ಷಣಿಕ ಜೀವನವು ನಿಶ್ಚಿತ ಗುರಿ ತಲುಪುವಲ್ಲಿ ಯಾವುದೇ ತೊಂದರೆ ಆಗಲು ಸಾಧ್ಯವಿಲ್ಲ

**ಮಕ್ಕಳ ಓದಿನಲ್ಲಿ ಪಾಲಕರ ಪಾತ್ರ :**

* ಮಕ್ಕಳಿಗೆ ಕೈಗೆಟಕುವ ದೇವರೆಂದರೆ ಅದು ತಂದೆ ತಾಯಿಗಳು ಮಾತ್ರ, ಮಕ್ಕಳ ಉಜ್ವಲ ಭವಿಷ್ಯಕ್ಕೆ ಪಾಲಕರೆ ದಾರಿ ದೀವಿಗೆಗಳು ಹಾಗಾಗಿ ಮಕ್ಕಳ ಭವಿಷ್ಯ ರೂಪಣೆಗೆ ಪಾಲಕರು ಉತ್ತಮ ಮಾರ್ಗದರ್ಶನ ಮಾಡಬೇಕು.

* ಮಕ್ಕಳ ಆಸಕ್ತಿ ಅಭಿರುಚಿಗೆ ತಕ್ಕಂತೆ ಓದುವ ಮುಕ್ತ ಅವಕಾಶವನ್ನು ಅವರಿಗೆ ನೀಡಬೇಕು.

* ಮಕ್ಕಳಿಗೆ ಓದಿನಲ್ಲಿ ಒತ್ತಡ ಹಾಗೂ ಅತಿಯಾದ ಆಕಾಂಕ್ಷೆಗಳ ಮೂಟೆಗಳನ್ನು ಎಂದೂ ಹೊರಿಸಬಾರದು.

* ಕಡಿಮೆ ಅಂಕಗಳಿಸಿದ ಮಕ್ಕಳಿಗೆ ಆಘಾತಕಾರಿ ನಿಂದನೆಗಳನ್ನು ಮಾಡಬಾರದು.

* ಬೇರೆ ಮಕ್ಕಳ ಬುದ್ಧಿಮಟ್ಟಕ್ಕೆ ಎಂದಿಗೂ ತಮ್ಮ ಮಕ್ಕಳ ಬುದ್ಧಿಮಟ್ಟವನ್ನು ಹೋಲಿಸಿ ನಿಂದಿಸಬಾರದು.

* ತಮ್ಮ ಮಕ್ಕಳ ಬುದ್ಧಿಮತ್ತೆಗೆ ಅನುಸಾರವಾಗಿ ಮುಂದಿನ ತರಗತಿ (ಕೋರ್ಸ್) ಗಳಿಗೆ ಸೇರಿಸಿ ಅವರಿಗೆ ಪ್ರೋತ್ಸಾಹ ಒದಗಿಸಬೇಕು.

* ಬೇರೆಯವರಿಂದ ವಿವಿಧ ಕೋರ್ಸ್ ಗಳ ಬಗ್ಗೆ ಮಾಹಿತಿ ಪಡೆದು ಸೂಕ್ತ ಕೋರ್ಸ್ ನ ಆಯ್ಕೆಯನ್ನು ಮಾಡುವಲ್ಲಿ ಮಕ್ಕಳಿಗೆ ಪಾಲಕರು ಸಹಾಯ ಮಾಡಬೇಕು.

* ಮಕ್ಕಳ ಮೇಲೆ ಇದೇ ಕೋರ್ಸ್ ಸೇರು ಇದೇ ನೌಕರಿ ಪಡೆಯಬೇಕೆಂಬ ಕಟ್ಟಾಜ್ಞೆಯನ್ನು ಮಾಡಬಾರದು .

* ಮಕ್ಕಳ ಶೈಕ್ಷಣಿಕ ಜೀವನದ ಜೊತೆಯಲ್ಲಿ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಕಡೆಗೂ ಪಾಲಕರು ನಿಗಾ ವಹಿಸಬೇಕು.

* ತಮ್ಮ ಮಕ್ಕಳ ಶೈಕ್ಷಣಿಕ ಜೀವನವು ಉಲ್ಲಾಸ ಹಾಗೂ ಉತ್ಸಾಹದಿಂದ ಕೂಡಿರುವಂತೆ ನೋಡಿಕೊಳ್ಳಬೇಕು.

* ಮಕ್ಕಳ ಶೈಕ್ಷಣಿಕ ದ ಪ್ರತಿ ಸೋಲಿನಲ್ಲೂ ಆತ್ಮಸ್ಥೈರವನ್ನು ತುಂಬಿ ಅವರನ್ನು ಖಿನ್ನತೆಯಿಂದ ಹೊರಬರುವಂತೆ ಮಾಡಬೇಕು.

* ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ನಡತೆ ಹಾಗೂ ಆಚಾರ ವಿಚಾರಗಳ ಪರಿಕಲ್ಪನೆಯನ್ನು ಚಿಕ್ಕಂದಿನಿಂದಲೇ ಮೂಡಿಸಬೇಕು.

* ಮಕ್ಕಳ ಜೊತೆ ಪಾಲಕರ ಸಂಬಂಧವು ಉತ್ತಮ ಹಾಗೂ ಸಂತೋಷಕರ ವಾತಾವರಣ ನಿರ್ಮಿಸಿಕೊಂಡಿರಬೇಕು.

* ಮಕ್ಕಳ ಪ್ರತಿ ಅಭಿರುಚಿಯನ್ನು ಸಮ್ಮತಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು.

* ಕೇವಲ ಓದುವ ಹಾಗೂ ಉತ್ತಮ ಅಂಕ ಗಳಿಸುವ ಒತ್ತಡದ ಉದ್ದೇಶವನ್ನು ಮಕ್ಕಳ ಮೇಲೆ ಎಂದು ಹಾಕಬಾರದು.

ಒಟ್ಟಿನಲ್ಲಿ ಮಕ್ಕಳ ಭವಿಷ್ಯವನ್ನು ನಿರೂಪಿಸುವಲ್ಲಿ ಪಾಲಕರು ಸರ್ವ ಪ್ರೋತ್ಸಾಹವನ್ನು ನೀಡಿ ಉತ್ತಮ ನಾಗರೀಕರಾಗುವಂತೆ ಮಾಡುವುದು ಅವರ ಕರ್ತವ್ಯವಾಗಿದೆ.

**ಶೈಕ್ಷಣಿಕ ಕ್ಷೇತ್ರದ ಆಯ್ಕೆಯಲ್ಲಿ ಮಕ್ಕಳ ಪಾತ್ರ :**

* ಮಕ್ಕಳು ಮೊದಲು ತಮ್ಮ ಆಸಕ್ತಿಗೆ ಅನುಗುಣವಾಗಿ ವಿಷಯ ಹಾಗೂ ಅಧ್ಯಯನದ ಕ್ಷೇತ್ರಗಳ ಆಯ್ಕೆಯನ್ನು ಮಾಡಬೇಕು.

* ಬೇರೆಯವರ ಉತ್ತಮ ಸಲಹೆಯನ್ನು ಪಡೆಯಬೇಕು. * ತಂದೆ ತಾಯಿಯರ ಮಾರ್ಗದರ್ಶನವನ್ನು ಪಡೆಯಬೇಕು.

* ಬೇರೆಯವರನ್ನು ಹೋಲಿಸಿಕೊಂಡು ಕಠಿಣ ತರಗತಿಗಳ ಅಧ್ಯಯನ ಆಯ್ಕೆ ಮಾಡಕೂಡದು.

* ತಮ್ಮ ನೆಚ್ಚಿನ ಗುರುಗಳ ಮಾರ್ಗದರ್ಶನ ಪಡೆದು ಮುಂದಿನ ವಿದ್ಯಾಭ್ಯಾಸ ಕೈಗೊಳ್ಳಬೇಕು.

* ನಿಮ್ಮ ಕುಟುಂಬದಲ್ಲೇ ಉತ್ತಮ ಸಾಧನೆ ಮಾಡಿದ ವ್ಯಕ್ತಿಗಳನ್ನು ಸಂಪರ್ಕಿಸಿ ಶೈಕ್ಷಣಿಕ ಮಾರ್ಗದರ್ಶನ ಪಡೆಯಬೇಕು.

* ಕಠಿಣ ತರಗತಿಗಳನ್ನು ಆಯ್ಕೆ ಮಾಡುವ ಮೊದಲು ಹತ್ತು ಬಾರಿ ಯೋಚಿಸಿ ದೃಢ ನಿರ್ಧಾರ ಕೈಗೊಳ್ಳಬೇಕು.

* ಒಮ್ಮೆ ಗಟ್ಟಿ ನಿರ್ಧಾರ ಮಾಡಿ ಮುಂದಿನ ತರಗತಿಯನ್ನು ಸೇರಿದ ಮೇಲೆ ಶ್ರಮವಹಿಸಿ ವಿದ್ಯಾಭ್ಯಾಸ ಮಾಡಬೇಕು. *ಯಾವುದೇ (ಕೋರ್ಸ್) ತರಗತಿಗಳನ್ನು ಅರ್ಧಕ್ಕೆ ನಿಲ್ಲಿಸಿ, ಬೇರೆ ಕೋರ್ಸ್ ಗಳಿಗೆ ಸೇರದೆ ಇದ್ದುದರಲ್ಲಿ ಮುಂದುವರೆದು ಸಾಧಿಸಬೇಕು.

* ಜೀವನದಲ್ಲಿ ಒಂದು ನಿಶ್ಚಲ ಗುರಿಯನ್ನು ಹೊಂದಿ ಅದರ ಅಡಿಯಲ್ಲಿಯೇ ಸಾಗಬೇಕು.

* ಮೊದಲು ನಿಮ್ಮ ಆಸಕ್ತಿ ಹಾಗೂ ಬುದ್ಧಿಮತ್ತೆಗೆ ಅನುಸಾರವಾಗಿ ನೀವು ಮುಂದಿನ ಶೈಕ್ಷಣಿಕ ತರಗತಿಗಳ ಆಯ್ಕೆ ಮಾಡಿಕೊಳ್ಳಬೇಕು.

* ಯಾರ ಒತ್ತಡ ಹಾಗೂ ಅಪೇಕ್ಷೆಗಾಗಿ ನಿಮ್ಮ ಶೈಕ್ಷಣಿಕ ಕ್ಷೇತ್ರದ ಆಯ್ಕೆಯನ್ನು ಮಾಡಬೇಡಿ.

* ನಿಮ್ಮ ಜೀವನವು ಈ ಸಮಾಜಕ್ಕೆ ಒಂದು ಉತ್ತಮ ಕೊಡುಗೆ ಆಗುವಂತೆ ನಿರೂಪಿಸಿಕೊಳ್ಳಬೇಕು.

ಈ ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳು ಹಾಗೂ ಪಾಲಕರು ಉಚಿತ ಅಧ್ಯಯನದ ಕೋರ್ಸ್ಗಳನ್ನು ಆಯ್ಕೆ ಮಾಡಿಕೊಂಡು ಶ್ರಮವಹಿಸಿ ಅಧ್ಯಯನ ಕೈಗೊಂಡು ಉತ್ತಮ ಗುರಿಯನ್ನು ಹೊಂದಬೇಕು. ಅಲ್ಲದೆ ತಮ್ಮ ಜ್ಞಾನವು ಸಮಾಜಕ್ಕೆ ಒಂದು ಉತ್ತಮ ಮಾನವ ಸಂಪನ್ಮೂಲ ಒದಗಿಸಿ ಸದೃಢ ಸಮಾಜ ಕಟ್ಟುವಲ್ಲಿ ಸಹಕಾರಿ ಆಗಬೇಕಾಗಿದೆ.

* * *



ಅಶ್ವಿನಿ ಅಂಗಡಿ
ಬದಾಮಿ

# ರಾಯಬಾಗ ಹುಲ್ಯಾಳ ಕೆರೆಗೆ ನೀರು

## ಸಚಿವ ಸತೀಶ ಜಾರಕಿಹೊಳಿ ಅವರಿಗೆ ಅಭಿನಂದನೆಗಳು



**ರಾಯಬಾಗ :** ಪಟ್ಟಣಕ್ಕೆ ಕುಡಿಯುವ ನೀರಿನ ಪ್ರಮುಖ ಮೂಲವಾಗಿರುವ ಹುಲ್ಯಾಳ ಕೆರೆಗೆ ಹಿಡಕಲ್ ಡ್ಯಾಂನಿಂದ ಕಾಲುವೆ ಮೂಲಕ ನೀರು ಹರಿಸಲು ಅಧಿಕಾರಿಗಳಿಗೆ ಆದೇಶಿಸಿ ನೀರು ಬಿಡಿಸಿರುವ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಪಟ್ಟಣದ ಜನತೆ ಪರವಾಗಿ ಅಭಿನಂದಿಸುವುದಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ ಹೇಳಿದರು. ಇತ್ತೀಚಿಗೆ ರವಿವಾರ ಸಾಯಂಕಾಲ ಪಟ್ಟಣದ ಹುಲ್ಯಾಳ ಕೆರೆಗೆ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಭೇಟಿ ನೀಡಿ, ಕೆರೆಗೆ ಹರಿದು ಬರುತ್ತಿರುವ ನೀರನ್ನು ವೀಕ್ಷಿಸಿ ಮಾತನಾಡಿದರು. ಪಟ್ಟಣದ ಹುಲ್ಯಾಳ ಕೆರೆ ಬರಿದಾಗಿದ್ದರಿಂದ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದರಿಂದ ಇಲ್ಲಿನ ನಾಗರಿಕರು ಮತ್ತು ಕರವೇ ಸಂಘಟನೆಯವರು ನೀರು ಹರಿಸಲು ಮನವಿ ಮಾಡಿಕೊಂಡಿದ್ದರ ಹಿನ್ನಲೆಯಲ್ಲಿ ಇಲ್ಲಿನ ಪರಿಸ್ಥಿತಿ ಮನಗಂಡು ಸಚಿವರು ದುಪದಾಳ ಡ್ಯಾಂ ಹಾಗೂ ಹಿಡಕಲ್ ಡ್ಯಾಂಗಳಲ್ಲಿ 21 ಟಿಎಮ್ಸಿ ನೀರಿನ ಸಂಗ್ರಹವಿದ್ದರಿಂದ , ಅಲ್ಲಿಂದ ನೀರು ಹರಿಸಲು ಅಧಿಕಾರಿಗಳಿಗೆ ಸೂಚಿಸಿದ್ದರು. ಸಧ್ಯದ ಮಟ್ಟಿಗೆ ಜನ ಜಾನುವಾರುಗಳಿಗೆ ನೀರು ಲಭ್ಯವಾಗಲಿದ್ದು, ಮತ್ತೆ ಮುಂದಿನ ತಿಂಗಳು ನೀರು ಹರಿಸಲಾಗುವುದು ಎಂದು ತಿಳಿಸಿರುವುದಾಗಿ ಹೇಳಿದರು.

ಮುಖಂಡರಾದ ಶಿವು ಪಾಟೀಲ ಮಾತನಾಡಿ, ಈ ಭಾಗದ ಜನರ, ರೈತರ ಮನವಿಗೆ ಸ್ಪಂದಿಸಿದ ಸಚಿವರು, ಪ್ರಾದೇಶಿಕ ಆಯುಕ್ತರ ಆದೇಶದ ಮೂಲಕ ಜೆಎಲ್ಬಿಸಿ ಕಾಲುವೆಗೆ ದುಪದಾಳ ಡ್ಯಾಂ ಮೂಲಕ ಹಾಗೂ ರಾಯಬಾಗ ಕೆರೆಗೆ ಹಿಡಕಲ್ ಡ್ಯಾಂ ಮೂಲಕ ಜನಜಾನುವಾರುಗಳಿಗೆ ಕುಡಿಯಲ ನೀರು ಹರಿಸಲು ಕ್ರಮಕೈಗೊಂಡಿದ್ದಾರೆ. ಈಗ ಕೆರೆಗೆ ದಿನನಿತ್ಯ 100 ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಏಪ್ರಿಲ್ 10 ರಿಂದ 20 ರವರೆಗೆ ಹತ್ತು ದಿನಗಳ ವರೆಗೆ ನೀರು ಹರಿಸಲು ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಈ ಭಾಗದ ಜನರ ಮತ್ತು ರೈತರ ಪರವಾಗಿ ಅಧಿಕಾರಿಗಳಿಗೆ ಮತ್ತು ಸಚಿವರಿಗೆ ಅಭಿನಂದಿಸುವುದಾಗಿ ತಿಳಿಸಿದರು.

ರಾಯಬಾಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಬಂಡಗರ, ಕಾಂಗ್ರೆಸ್ ಮುಖಂಡರಾದ ಸದಾಶಿವ ದೇಶಿಂಗೆ, ಅಬ್ದುಲ್ಸತ್ತಾರ ಮುಲ್ಲಾ, ದಿಲೀಪ ಜಮಾದಾರ, ನಾಮದೇವ ಕಾಂಬಳೆ, ಹಾಜಿ ಮುಲ್ಲಾ, ತಮ್ಮಣ್ಣಿ ನಿಂಗನೂರೆ, ಜ್ಯೋತಿ ಕೆಂಪಟ್ಟಿ, ಸಂತೋಷ ಶೇಲಾರ, ಯುನೂಸ ಅತ್ತಾರ, ಮುಜಿಬರ ಸಯ್ಯದ, ಆದಮ್ ಪಠಾಣ, ಪ್ರಶಾಂತ ಕಾಂಬಳೆ ಮತ್ತಿತರರು ಉಪಸ್ಥಿತರಿದ್ದರು.

**ವರದಿ: ಡಾ. ಜಯವೀರ ಎ.ಕೆ.**
**ಖೇಮಲಾಪುರ**

# ಹುನ್ನೂರು ಸರಕಾರಿ ಕಾಲೇಜಿಗೆ ಶೇ.94.50ರಷ್ಟು ಫಲಿತಾಂಶ





**ಜಮಖಂಡಿ :** ತಾಲೂಕಿನ ಹುನ್ನೂರು ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪಿಯು ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಮೂಲಕ ಶೇ.94.50ರಷ್ಟು ಫಲಿತಾಂಶ ಪಡೆದಿದೆ. 135 ಡಿಸ್ಟಿಂಕ್ಷನ್, 261 ಪ್ರಥಮ, 46 ದ್ವಿತೀಯ, 5 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣಗೊಂಡಿದ್ದಾರೆ.

ಕಲಾವಿಭಾಗದ 281 ವಿದ್ಯಾರ್ಥಿಗಳಲ್ಲಿ 267 (ಶೇ.95) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದ 143 ವಿದ್ಯಾರ್ಥಿಗಳ ಪೈಕಿ 141 (ಶೇ.98.6) ಹಾಗೂ ವಿಜ್ಞಾನ ವಿಭಾಗದಲ್ಲಿ 49 ವಿದ್ಯಾರ್ಥಿಗಳ ಪೈಕಿ 39 (ಶೇ.80) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕಲಾವಿಭಾಗದಲ್ಲಿ ಸಂದೀಪ ನಾವಿ 583 ಅಂಕ, ವಾಣಿಜ್ಯ ವಿಭಾಗದಲ್ಲಿ ಮಹಾನಂದಾ ಭದ್ರದ 580 ಅಂಕ, ವಿಜ್ಞಾನ ವಿಭಾಗದಲ್ಲಿ ಆನಂದ ನಾಕುಮಾನ 544 ಅಂಕ ಪಡೆದು ಆಯಾ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಪ್ರಾಚಾರ್ಯ ಎಸ್.ಬಿ.ಮುಂಡಗನೂರ ಸಹಿತ ಶಿಕ್ಷಕ ವೃಂದವರು, ಆಡಳಿತ ಮಂಡಳಿ ಸಹಿತ ಹಲವರು ಅಭಿನಂದಿಸಿದ್ದಾರೆ.

### ಲೋಕಸಭಾ ಚುನಾವಣೆ: ಪಾದಯಾತ್ರೆ ಮೂಲಕ ಬಿಜೆಪಿ ಅಭ್ಯರ್ಥಿ ಗದ್ದಿಗೌಡರ, ನಾರಾಯಣಸಾ ಭಾಂಡಗೆ, ವೀರಣ್ಣ ಚರಂತಿಮಠರಿಂದ ಮತಯಾಚನೆ

# ಜಿಲ್ಲೆಗೆ ಅಗತ್ಯವಿರುವ ಅಭಿವೃದ್ಧಿಗಳನ್ನು ಮಾಡಿದ ಆತ್ಮವಿಶ್ವಾಸ ನನಗಿದೆ: ಗದ್ದಿಗೌಡರ



**ಬಾಗಲಕೋಟೆ :** ಜಿಲ್ಲೆಗೆ ಅಗತ್ಯವಿರುವ ಅಭಿವೃದ್ಧಿ ಕಾರ್ಯಗಳನ್ನು ನನ್ನ ಅವದಿಯಲ್ಲಿ ನಾನು ಮಾಡಿದ್ದೇನೆ, ಜಿಲ್ಲೆಯ ಜನರಿಗೆ ಗೊತ್ತಿದೆ, ಮಾಡಿದ ಅಭಿವೃದ್ಧಿ ಕೆಲಸಗಳ ಬಗ್ಗೆ ನನಗೆ ಆತ್ಮವಿಶ್ವಾಸವಿದೆ ಆ ನಿಟ್ಟಿನಲ್ಲಿ ಮತ್ತೊಮ್ಮೆ ಚುನಾವಣೆಗೆ ಸ್ಪರ್ದಿಸಿರುವೆ ಮತದಾರರ ಆಶೀರ್ವಾದ ದಿಂದ ನಿಶ್ಚತವಾಗಿ ಗೆಲ್ಲುತ್ತೇನೆ ಎಂದು ಲೋಕಸಭಾ ಬಿಜೆಪಿ ಅಭ್ಯರ್ಥಿ ಹಾಗೂ ಸಂಸದರಾದ ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ರವಿವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಪಾದಯಾತ್ರೆ ಮೂಲಕ ಮನೆ ಮನೆಯ ಪ್ರಚಾರದಲ್ಲಿ ಭಾಗವಹಸಿ ಮತಯಾಚನೆ ಮಾಡಿ ಮಾತನಾಡಿದರು,

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತದಲ್ಲಿ ಸರ್ವ ಸಮುದಾಯಗಳಿಗೆ ಸಮಾನ ಯೋಜನೆಗಳನ್ನು ರೂಪಿಸಿ, ದೇಶದ ಸರ್ವಾಂಗಿಣ ಅಭಿವೃದ್ಧಿ ಆಗುತ್ತಿದೆ, ಆ ನಿಟ್ಟಿನಲ್ಲಿ ಬಾಗಲಕೋಟೆ ಜಿಲ್ಲೆಗೆ ಅವಶ್ಯವಿರುವ ರಾಷ್ಟ್ರೀಯ ಹೆದ್ದಾರಿಗಳಾದ ಬಾನಾಪೂರ–ಗದ್ದನಕೇರಿ ಕ್ರಾಸ್ ರಾಷ್ಟ್ರೀಯ ಹೆದ್ದಾರಿ, ಬಾಡಗಂಡಿಯಿಂದ ನರಗುಂದ, ಮಲಪ್ರಭಾ ನದಿಗೆ ಕೋಣ್ಣೂರ ಹತ್ತಿರ ಬ್ರೀಜ್, ನರಗಗುಂದ ವರವಲಯದ ಬೈಪಾಸ್ ರಸ್ತೆ ಸೇರಿದಂತೆ ಒಟ್ಟು 20 ಕಾಮಗಾರಿಗಳು 114 ಕೋಟಿ ರೂ ವೆಚ್ಚದಲ್ಲಿ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿವೆ, ರೇಲ್ವೆ ಸಂಪರ್ಕ ಹಾಗೂ ಆಧುನಿಕ ರೈಲು ನಿಲ್ದಾಣಗಳು, ಬಾಗಲಕೋಟೆ ಕುಡಚಿಮಾರ್ಗ,ಗದಗ ಹುಟಗಿ ಮಾರ್ಗ,ಜಿಲ್ಲಾ ಕೇಂದ್ರದಲ್ಲಿ 12.45 ಕೋಟಿ ರೂ ವೆಚ್ಚದಲ್ಲಿ ನೂತನ ಅತ್ಯಾಧುನಿಕ ರೈಲ್ವೆ ನಿಲ್ದಾಣ ನಿರ್ಮಾಣ, ಮತ್ತು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಮುಂಗಾರು ಹಂಗಾಮಿಗೆ ರೈತರಿಗೆ ರೂ,8475,06 ಲಕ್ಷ ಪರಿಹಾರ ವಿತರಿಸಲಾಗಿದೆ ಇದರಲ್ಲಿ 69.822 ರೈತರು ಈ ಯೋಜನೆ ಪ್ರಯೋಜನ ಪಡೆದಿದ್ದಾರೆ, ಇನ್ನು ಹಿಂಗಾರು ಹಂಗಾಮಿಗೆ ರೂ,10980.07 ಲಕ್ಷ ಪರಿಹಾರ ವಿತರಿಸಲಾಗಿದೆ, 57.354 ರೈತರು ಪ್ರಯೋಜನ ಪಡೆದಿದ್ದಾರೆ,ಪ್ರಧಾನ ಮಂತ್ರಿ ಕಿಸಾನ ಸಮ್ಮಾನ ನಿಧಿ ಯೋಜನೆಯಲ್ಲಿ 2018–19 ರಿಂದ 2020–23 ವರೆಗೆ 7.71.589 ರೈತರು ನೋಂದಾಯಿಸಿಕೊಂಡಿದ್ದಾರೆ, ಇವರಿಗೆ ಈ ಯೋಜನೆಯಡಿ 446.98 ಕೋಟಿ ರೂ ಮೊತ್ತ ರೂ,6000 ದಂತೆ ನಾಲ್ಕು ತಿಂಗಳಿಗೊಮ್ಮೆ 3 ಕಂತುಗಳಲ್ಲಿ ಕೇಂದ್ರ ಸರಕಾರದಿಂದ ರೈತರ ಖಾತೆಗೆ ಜಮಾ ಆಗಿದೆ,ಹೃದಯ ಯೋಜನೆಯಡಿ ಚಾಲೂಕ್ಯರ ರಾಜದಾನಿ ಬದಾಮಿಗೆ ರೂ, 22.60 ಕೋಟಿ ವೆಚ್ಚದಲ್ಲಿ ಬಾದಾಮಿ ನಗರದ ಸೌಂದರ್ಯಕರಣ ಅಭಿವೃದ್ಧಿ ಮಾಡಲಾಗಿದೆ, ಬಾಗಲಕೋಟೆ ಲೋಕಸಭಾ ವ್ಯಾಪ್ತಿಗೆ ಬರುವ ಬಾದಾಮಿ,ಪಟ್ಟದಕಲ್ಲು,ಐಹೊಳೆ, ಶಿವಯೋಗ ಮಂದಿರ, ಬನಶಂಕರಿ, ಹಳ್ಳೂರ,ಬೇವೂರ, ಚೊಳಚಗುಡ್ಡ, ಲಕ್ಕುಂಡಿ ಪಾರಂಪರಿಕ ತಾಣಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಹಾಗು ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರಕಾದ ಪುರಾತತ್ವ ಇಲಾಖೆಯಿಂದ 1333.26 ಕೋಟಿ ಮಂಜುರಾಗಿದೆ, ನೇಕಾರರಿಗೆ ಮಾಸಿಕ ಸಹಾಧನ, ಕೈಮಗ್ಗ ನೇಕಾರರ ಮಕ್ಕಳಿಗೆ ಶಿಷ್ಯವೇತನ,ಇನ್ನು ಹತ್ತಾರು ಅಭಿವೃದ್ಧಿ ಕೆಲಸಗಳ ಜೋತಗೆ ಕೇಂದ್ರ ಅನೇಕ ಯೋಜನೆಗಳನ್ನು ಜನರಿಗೆ ತಲುಪಿಸಿದ್ದವೆ ಎಂದರು.

ಇದೆ ಸಂಧರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ರಾಜ್ಯದಲ್ಲಿ ಬಿಜೆಪಿ ಸರಕಾರ ಇದ್ದಾಗ ನಮ್ಮ ಬಾಗಲಕೋಟೆ ಮತಕ್ಷೇತ್ರದಲ್ಲಿ 6000 ಸಾವಿರ ಕೋಟಿ ರೂ ವೆಚ್ಚದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿದ್ದು, ಇನ್ನ ಕೂಡಾ ಕೆಲವೂ ಕಾಮಗಾರಿ ನಡೆದಿದ್ದು ಎಲ್ಲವೂ ಜನರ ಕಣ್ಣಮುಂದೆ ಇದೆ, ಅಭಿವೃದ್ಧಿ ದೃಷ್ಟಿಯಿಂದ ಜನ ಬಿಜೆಪಿಯನ್ನು ಬೆಂಬಲಿಸಿದ್ದಾರೆ, ಇಂದು ವಿಶ್ವವೇ ಭಾರತವನ್ನು ತಿರುಗಿ ನೋಡುವಂತೆ ಮಾಡಿದ ಪ್ರಧಾನ ಮೋದಿಯವರನ್ನು ಜನ ಎಂದು ಮರೆಯುವದಿಲ್ಲಾ ಕೇಂದ್ರದಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತಂದು ನರೇಂದ್ರ ಮೋದಿಯವರನ್ನು ಪ್ರಧಾನಿಯನ್ನಾಗಿ ಮಾಡುತ್ತಾರೆ ಎಂದರು.

ಪಾದಯಾತ್ರೆಯಲ್ಲಿ ರಾಜ್ಯ ಸಭಾ ಸಸ್ಯ ನಾರಾಯಣಸಾ ಭಾಂಡಗೆ, ನಗರಸಭೆ ಸದಸ್ಯರಾದ ಶಶಿಕಲಾ ಮಜ್ಜಗಿ,ಸಾಗರ ಬಂಡಿ, ಈಶ್ವರ ಸುಗಂದಿ, ಸಂಗಣ್ಣತಿಮ್ಮಣ್ಣವರ, ರಾಮಣ್ಣ ಕಟ್ಟಿಮನಿ, ಅಶೋಕ ಕಲಾಲ, ದಶರಥ ಪತಂಗೆ, ಸವಿತಾ ಗಡ್ಡಿಮಠ, ವಿದ್ಯಾ ಅಕಸ್ತ್ಯ, ಶಂಕರ ತೇಲಕರ, ಬಸವರಾಜ ಬಡಿಗೇರ, ಸುನಿಲ ಯಾಳಗಿ, ಮಲ್ಲು ಬಾಳಪ್ಪನ್ನವರ,ದ್ಯಾನೇಶ್ವರ ಕಪಾಟೆ, ಮಂಜು ಏಳಮ್ಮಿ, ಬಸಪ್ಪ ಯಳ್ಳಿಗುತ್ತಿ, ಸಂಗಪ್ಪ ಕೊಪ್ಪದ, ಬಂಡೆಪ್ಪ ಏಳೆಮ್ಮಿ, ಮಲ್ಲಿಕಾರ್ಜುನ ಗಿರಗಾಂವಿ, ಸಂಕಣ್ಣ ಗಿರಗಾಂವಿ, ಮಹಾಂತೇಶ ಯಳ್ಳಿಗುತ್ತಿ, ಮಂಜು ಅಂಬಿಗೇರ, ರೇಣುಕಾ ಬಡಿಗೇರ, ಸಂಗಣ್ಣ ಹಡಗಲಿ, ಸುರೇಶ ಮಜ್ಜಗಿ, ಶ್ರೀಶೈಲ ಗಾಣಿಗೇರ,ಬಸು ಪುಜಾರಿ ಸೇರಿದಂತೆ ನಗರಸಭೇ ಸದಸ್ಯರು, ಜಿಲ್ಲಾ ಪದಾಧಿಕಾರಿಗಳು, ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು. ಗಜಾನನ ಚೌಕದಿಂದ ಪ್ರಾರಂಭವಾದ ಪಾದಯಾತ್ರೆ ನಗರದ 5 ಮತ್ತು 7 ನೇ ವಾರ್ಡಗಳಲ್ಲಿ ಸಂಚರಿಸಿ ಜೈನಪೇಟೆ,ಹಳಪೇಟೆ, ಕುಂಬಾರ ಮಡುವಿನಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೇರಳಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ ಮಾಡಲಾಯಿತು.

# ಶ್ರೀಶೈಲ ಪಾದಯಾತ್ರಿಗಳ ಸ್ವ–ಗ್ರಾಮಾಗಮನ



**ಚಿಮ್ಮಡ :** ಗ್ರಾಮದಿಂದ ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆಯ ಮೂಲಕ ತೆರಳಿದ್ದ ಮುನ್ನೂರಕ್ಕೂ ಹೆಚ್ಚು ಜನ ಭಕ್ತಾದಿಗಳು ಇಂದು ಗ್ರಾಮದ ದ್ವಾರ ಬಾಗಿಲಿನ ಮೂಲಕ ಸ್ವಗ್ರಾಮ ಪ್ರವೇಶಿಸಿದರು.

ಕಳೆದ ಹದಿನೈದು ದಿನಗಳ ಹಿಂದೆ ಹೋಳಿ ಹುಣ್ಣಿಮೆ ಕರಿ ದಿನದಂದು ಗ್ರಾಮದಿಂದ ನೆರೆಯ ಆಂದ್ರ ಪ್ರದೇಶದ ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆ ಮೂಲಕ, ವಾಹನಗಳ ಮೂಲಕ ತೆರಳಿದ್ದ ನೂರಾರು ಜನ ಭಕ್ತಾಧಿಗಳು ಕಳೆದ ನಾಲ್ಕು ದಿನಗಳಿಂದ ಗ್ರಾಮದಿಂದ ಹೊರಗಡೆಯಿರುವ ದೇವಸ್ಥಾನಗಳಲ್ಲಿ, ಶಾಲೆಗಳಲ್ಲಿ ಬೀಡು ಬಿಟ್ಟಿದ್ದರು, ವಾಸ್ತವ್ಯ ವಿರುವ ಸ್ಥಳದಲ್ಲಿಯೇ ಪಾದಯಾತ್ರಿಗಳಿಗೆ ಕಳೆದ ಮೂರು ದಿನಗಳವರೆಗೆ ಊಟ ಮತ್ತು ಉಪಹಾರದ ವ್ಯವಸ್ಥೆಯನ್ನು ಮುಸ್ಲಿಂ ಸಮಾಜಬಾಂಧವರೂ ಸೇರಿದಂತೆ ಹಲವಾರು ಜನ ಭಕ್ತಾಧಿಗಳು ವ್ಯವಸ್ಥೆಗೊಳಿಸಿ ಸಾಮರಸ್ಯ ಮೆರೆದರು. ಪ್ರತೀತಿಯಂತೆ ಐದೇಶಿಯ ಐದು ದಿನಗಳ ಮುಂಚಿನ ದಿನವಾದ ರವಿವಾರ ಮುಂಜಾನೆ ಶ್ರೀ ಪ್ರಭು ಮಹಾಸ್ವಾಮಿಗಳಿಂದ ಮಂಗಳಾರತಿ ನೆರವೇರಿಸುವ ಮೂಲಕ ಪಾದಯಾತ್ರಿಗಳನ್ನು ಗ್ರಾಮದೊಳಗೆ ಬರಮಾಡಿಕೊಳ್ಳಲಾಯಿತು. ಶ್ರೀ ಮಲ್ಲಯ್ಯದೇವರ ಕಂಬಿಯನ್ನು ಶ್ರೀಗಳು ಹೆಗಲಮೇಲೆ ಹೊತ್ತು ಗ್ರಾಮದ ದ್ವಾರ ಬಾಗಿಲಿನ ಮೂಲಕ ಗ್ರಾಮ ಪ್ರವೇಶಿಸಿದರು. ನಂತರ ಗುಡ್ಡದ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದಲ್ಲಿ ವೀಶೇಷ ಪೂಜೆ ಮದ್ಯಾಹ್ನದ ಪ್ರಸಾದ ಮಾಡಲಾಗಿತ್ತು ಸಂಜೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಡೆಯುವ ಮಹಾ ಮಂಗಲಪ್ರಸಾದ ಸ್ವೀಕಾರದೊಂದಿಗೆ ಪಾದಯಾತ್ರಿಗಳು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

# ತಾಲೂಕಾಡಳಿತದಿಂದ ಡಾ. ಅಂಬೇಡ್ಕರರಿಗೆ ಗೌರವ ಅರ್ಪಣೆ




**ಜಮಖಂಡಿ :** ನಗರದ ತಾಲೂಕಾಡಳಿತ ಸಭಾಭವನದಲ್ಲಿ ರವಿವಾರ ಸಂವಿಧಾನಶಿಲ್ಪಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರರ 133ನೇ ಜನ್ಮ ಜಯಂತಿ ಕಾರ್ಯಕ್ರಮವನ್ನು ಲೋಕಸಭಾ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳ ಮತ್ತು ಅರ್ಥಪೂರ್ವಾಗಿ ಆಚರಿಸಲಾಯಿತು.

ಉಪವಿಭಾಗಾಧಿಕಾರಿ ಸಂತೋಷ ಕಾಮಗೊಂಡ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಡಿ.ವೈ. ಎಸ್.ಪಿ.ಶಾಂತವೀರ, ತಹಶೀಲ್ದಾರ ಸದಾಶಿವ ಮಕ್ಕೋಜಿ, ತಾ.ಪಂ.ಕಾರ್ಯನಿರ್ವಾಹಕಾಧಿಕಾರಿ ಚಲುವೆಯ್ಯ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿ.ಎಸ್.ಗಡ್ಡದೇವರಮಠ, ಸಿಪಿಐ ಮಲ್ಲಪ್ಪ ಮಡ್ಡಿ, ಸಮಾಜದ ಹಿರಿಯರಾದ ಸಿದ್ದು ಮಿಸಿ, ಶಾಮರಾವ ಘಾಟಿಗೆ, ಮುತ್ತಣ್ಣ ಮೇತ್ರಿ, ಗಂಗರಾಜ ಪಾಣಿ, ಪ್ರೇಮ ಬಳೂಲಗಿಡದ, ಪರುಶುರಾಮ ಕಾಂಬಳೆ, ಈಶ್ವರ ವಾಳೆನ್ನವರ, ಪರಶುರಾಮ ಮರೆಗುದ್ದಿ, ಜಿಲ್ಲಾ ಜಾಗೃತ ಸಮಿತಿ ಸದಸ್ಯ ಶಶಿಧರ ಮೀಸಿ, ಸುಭಾಷ ಲಗಳಿ, ಚನ್ನಪ್ಪ ಗುಣದಾಳ ಪರಮಾನಂದ ಗೌವರೋಜಿ, ದಾನೇಶ ಘಾಟಿಗೆ ಸಹಿತ ಹಲವರು ಇದ್ದರು.

ನಗರದಸಮಾಜಕಲ್ಯಾಣಇಲಾಖೆಯಲ್ಲಿಡಾ.ಬಿ.ಆರ್. ಅಂಬ್ಬೇಡಕರ ಭಾವಚಿತ್ರಕ್ಕೆ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿ.ಎಸ್.ಗಡ್ಡದೇವರಮಠ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದು. ನಗರದ ಡಾ.ಬಿ.ಆರ್. ಅಂಬೇಡ್ಕರ ವೃತ್ತದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಕಂಚಿನ ಮತ್ಥಳಿಗೆ ಗೌರವ ಸಲ್ಲಿಸಿದರು.

# ವಚನಗಳ ಮೂಲಕವೇ ಸಾಮಾಜಿಕ ಕ್ರಾಂತಿ: ಪ್ರಭುಶ್ರೀ



**ಚಿಮ್ಮಡ :** ಆದ್ಯ ವಚನಕಾರ ದೇವಾಂಗ ಸಮಾಜದ ಆರಾಧಕ ದೇವರ ದಾಸಿಮಯ್ಯನವರ ಆದರ್ಶ ಮನುಕುಲಕ್ಕೆ ಸಂದೇಶ ನೀಡಿದೆಯಂದು ಸ್ಥಳೀಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ದಾಸಿಮಯ್ಯ ವೃತ್ತದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ದೇವರ ದಾಸಿಮಯ್ಯನವರ ಜಯಂಯೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದ ಅವರು ದಾಸಿಮಯ್ಯನವರು ಒಂದೇ ಕುಲಕ್ಕೆ ಸಿಮಿತವಾಗಿರದೆ ಇಡೀ ಮನುಕುಲಕ್ಕೇ ಸಂದೇಶನೀಡುವ ಮಹಾನ್ ವ್ಯಕ್ತಿಯಾಗಿದ್ದರು, ಅವರ ವಚನ ಸಾಹಿತ್ಯ ನಾಡಿನೆಲ್ಲೆಡೆ ಮನೆಮಾತಾಗಿದ್ದು ವಚನಗಳ ಮೂಲಕವೇ ಸಾಮಾಜಿಕ ಕ್ರಾಂತಿ ಮಾಡಿದ್ದಾರೆಂದರು.

ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ 11ನೇ ಶತಮಾನದಲ್ಲಿಯೇ ವಚನಗಳನ್ನು ರಚಿಸುವ ಮೂಲಕ ಸಮಾಜರ ಓರೆ ಕೋರೆಗಳನ್ನು ತಿದ್ದಿದ ಕೀರ್ತಿ ದೇವರ ದಾಸಿಮಯ್ಯನವರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೇವಾಂಗ ಸಮಾಜದ ಪ್ರಮುಖರಾದ ಶ್ರೀಕಾಂತ ಜಾಡಗೌಡರ ವಹಿಸಿದ್ದರು, ಅಶೋಕ ಧಡೂತಿ, ರಾಮಣ್ಣ ಬಗನಾಳ, ಗ್ರಾಂ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಬೀರಪ್ಪಾ ಹಳೆಮನಿ, ಮನೋಜ ಹಟ್ಟಿ, ಚನ್ನಪ್ಪಾ ಬಿಳ್ಳೂರ, ಬಸವರಾಜ ಕುಂಚನೂರ, ದುಂಡಪ್ಪಾ ಪಾಟೀಲ, ಪರಪ್ಪಾ ಬರಗಲ್, ಸುರೇಶ ಅಥಣಿ, ಬಸವರಾಜ ಕರಡಿ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

# ಡಾ. ಘನಶ್ಯಾಮ ವೈದ್ಯ ಇನ್ನಿಲ್ಲ



**ಘಟಪ್ರಭಾ :** ಇಲ್ಲಿಯ ಕರ್ನಾಟಕ ಆರೋಗ್ಯಧಾಮದ ಮುಖ್ಯ ವೈದ್ಯಾಧಿಕಾರಿಗಳು ಹಾಗೂ ಭಾರತ ಸೇವಾದಳದ ಸಂಸ್ಥಾಪಕ ನಾ. ಸು. ಹರ್ಡಿಕರ ಅವರ ನಿಕಟವರ್ತಿಗಳಾಗಿದ್ದ ಖ್ಯಾತ ಶಲ್ಯ ಚಿಕಿತ್ಸಕ ಡಾಕ್ಟರ್ ಘನಶ್ಯಾಮ ಮಾಧವರಾವ್ ವೈದ್ಯ ಅವರು ಎಪ್ರೀಲ್ ಹದಿನೈದರಂದು ವೈಕುಂಠವಾಸಿಗಳಾದರು. ಅವರಿಗೆ ೭೬ ವರ್ಷ ವಯಸ್ಸಾಗಿತ್ತು. ಅವರು ಕಳೆದ ಎರಡು ವರ್ಷಗಳಿಂದ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದರು.

೧೯೮೪ ರಲ್ಲಿ ಬಂಗಾರದ ಪದಕದೊಂದಿಗೆ ವೈದ್ಯ ಪದವಿ ಪಡೆದು, ಕರ್ನಾಟಕ ಆರೋಗ್ಯಧಾಮದಲ್ಲಿ ಸೇವೆ ಸಲ್ಲಿಸುತ್ತಿದ್ದ ಅವರು, ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ 'ಜಿ. ಪಿ. ಕ್ಲಿನಿಕ್' ಎಂಬ ಗ್ರಂಥ ರಚಿಸಿ ಆಡಿಯೋ ವ್ಹಿಡಿಯೊ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದರು. ' ಚಿಂತನೆ ' ಎಂಬ ವಿಶೇಷ ಗ್ರಂಥ ರಚಿಸಿ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರಿಂದ ಬಿಡುಗಡೆ ಮಾಡಿಸಿದ್ದರು. ಕರ್ನಾಟಕ ಸರ್ಕಾರ ಕೂಡ ಇವರನ್ನು ಗೌರವಿಸಿತ್ತು.

ಮೃತರು ತಮ್ಮ ಹಿಂದೆ ಪತ್ನಿ ಡಾ. ಸ್ವಾತಿ, ಇಬ್ಬರು ಪುತ್ರರಾದ ಡಾ. ರಾಹುಲ್, ಡಾ. ರೋಹಿತ್, ಸಹೋದರಿ ಡಾ. ಅಲಕಾ , ಸೊಸೆಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರು ರಬಕವಿಯಲ್ಲಿ ವಕೀಲರಾಗಿದ್ದ ದಿವಂಗತ ಕಿರಣ ಆರ್. ಬದಾಮಿಕರ ಅವರ ಪತ್ನಿಯ ಸೋದರ ಸಂಬಂಧಿಯಾಗಿದ್ದರು. ಮೃತರ ಪಾರ್ಥಿವ ಶರೀರದ ಮೆರವಣಿಗೆ ಘಟಪ್ರಭಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೃತರ ಗೌರವಾರ್ಥ ಇಡೀ ದಿನ ಘಟಪ್ರಭಾದ ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳು ಬಂದ್ ಮಾಡಿ ಗೌರವ ಸಲ್ಲಿಸಿದರು. ಮಾಜಿ ಸಂಸದ ಅಮರಸಿಂಹ ವಿ. ಪಾಟೀಲ, ರಾಮಣ್ಣ ಹುಕ್ಕೇರಿ, ಲಖನ್ ಸಂವಸುದ್ದಿ, ಬಸವರಾಜ ಹಟ್ಟಿಗೌಡರ, ಪ್ರಫುಲ್ ಶಿರಗಾಂವಕರ, ಸುಧೀರ್ ಜೋಡಟ್ಟಿ, ಸುರೇಶ ಪಾಟೀಲ, ಎಸ್. ಎಚ್. ಗಿರಡ್ಡಿ, ಸ್ಥಳೀಯ ಎಲ್ಲ ವೈದ್ಯರು, ಅಪಾರ ಸಂಖ್ಯೆಯ ಸಾರ್ವಜನಿಕರು ಮೃತರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು 'ಧಡಲ್ ಬಾಜಿ' ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

# ಅಗರವಾಲ್ ಯಾರು ನಮಗೂ ಗೊತ್ತಿಲ್ಲ



**ಬಾಗಲಕೋಟೆ :** ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಕೆ.ಎಸ್. ಈಶ್ವರಪ್ಪನವರ ಪಾತ್ರ ಬಹು ದೊಡ್ಡ ದಾಗಿದೆ. ಅಂತಹ ಹಿಂದುಳಿದ ವರ್ಗದ ನಾಯಕರಿಗೆ ಬಿ.ಎಸ್. ಯಡಿಯೂರಪ್ಪ ಅನ್ಯಾಯ ಮಾಡುತ್ತಿದ್ದಾರೆ. ಇದನ್ನು ಸರಿಪಡಿ ಸಬೇಕಾದ ಹಿರಿಯ ನಾಯಕರು ಮೌನಕ್ಕೆ ಜಾರಿರುವುದು ಸರಿಯಲ್ಲ ಎಂದು ಬಿಜೆಪಿ ಓಬಿಸಿ ಘಟಕದ ಜಿಲ್ಲಾಧ್ಯಕ್ಷ ವೀರಣ್ಣ ಹಳೇಗೌಡರ ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭೆ ಚುನಾವಣೆ ಯಲ್ಲಿ ಈಶ್ವರಪ್ಪನವರಿಗೆ ಟಿಕೆಟ್ ತಪ್ಪಿಸಲಾಯಿತು. ತ್ಯಾಗ ಮಾಡಿದರೂ ಪಕ್ಷದ ಪರವಾಗಿ ದುಡಿಮೆ ಮಾಡಿದ್ದಾರೆ. ನಂತರ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಪುತ್ರ ಕಾಂ ತೇಶಗೆ ಟಿಕೆಟ್ ನೀಡುವ ಭರವಸೆ ನೀಡಲಾಗಿತ್ತು. ದುರದ್ದೇಶದಿಂದ ಟಿಕೆಟ್ ತಪ್ಪಿಸಿ ಹಿಂದುಳಿದ ವರ್ಗಕ್ಕೆ ಅನ್ಯಾಯ ಮಾಡಲಾಗಿದೆ. ಇನ್ನೂ ಕಾಲ ಮಿಂಚಿಲ್ಲ ಯಡಿಯೂರಪ್ಪ ಅವರು ತಮ್ಮ ಪುತ್ರನನ್ನು ಕಣದಿಂದ ಹಿಂದಕ್ಕೆ ಸರಿಸಿ ಈಶ್ವರಪ್ಪನವರನ್ನು ಶಿವಮೊಗ್ಗ ಕ್ಷೇತ್ರಕ್ಕೆ ಅಂತಿಮಗೊ ಳಿಸಬೇಕು ಆ ಮೂಲಕ ಬಿ.ಎಸ್. ಯಡಿಯೂರಪ್ಪ ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾರೆ ಎಂದು ಮನವಿ ಮಾಡಿದರು. ಅಗರವಾಲ್ ಯಾರು ನಮಗೂ ಗೊತ್ತಿಲ್ಲ ; ಕೆ.ಎಸ್. ಈಶ್ವರಪ್ಪ ಕುರಿತು ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನದಾಸ್ ಅಗರ ವಾಲ್ ಅವರ ಹೇಳಿಕೆ ಕುರಿತು ಕೆಂಡಾಮಂಡಲರಾದ ಹಳೇ ಗೌಡರ, ರಾಜ್ಯದ ಜನತೆ ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರಿಗೆ ಅಗರವಾಲ್ ಯಾರು ಎನ್ನುವುದೆ ನಮಗೂ ಗೊತ್ತಿಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿದ್ದವರು ಪಕ್ಷದ ಪರವಾಗಿ ಕೆಲಸ ಮಾಡಿದವರ ಬಗ್ಗೆ ಗೌರವದಿಂದ ಮಾತನಾಡಬೇಕು. ಕೆ.ಎಸ್. ಈಶ್ವರಪ್ಪ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಬಿಜೆಪಿ ಪಕ್ಷ ಬಿಟ್ಟು ಹೋಗಿಲ್ಲ. ಬಿ.ಎಸ್. ಯಡಿಯೂರಪ್ಪ ಅವರಗಿಂತಲೂ ಪಕ್ಷ ನಿಷ್ಠೆ ಈಶ್ವರಪ್ಪದ್ದು ಮೇಲುಗೈ ಇದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಪ್ಪ ಕಲ್ಲಹೊಲ್ಲದ, ಮಂಜು ಸನದಿ, ತಿಪ್ಪಣ್ಣ ಹೆರಕಣ್ಣವರ್ ಇದ್ದರು.

# ತೇರದಾಳದಲ್ಲಿ 4.3 ಲಕ್ಷ ದಾಖಲೆ ಇಲ್ಲದ ಹಣ ವಶ



**ತೇರದಾಳ :** ತೇರದಾಳ ಕುಡಚಿ ರಸ್ತೆಯ ನಾಲ್ಕನೇ ಕಾಲುವೆ ಹತ್ತಿರ ಲೋಕಸಭೆ ಚುನಾವಣೆ ನಿಮಿತ್ತ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಸಂಜೆ ದಾಖಲೆ ಇಲ್ಲದೆ ತಗೆದುಕೊಂಡು ಹೋಗುತ್ತಿದ್ದ 4.3 ಲಕ್ಷ ಹಣವನ್ನು ಕರ್ತವ್ಯ ನಿರತ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಬೆಳಗಾವಿಯಿಂದ ತೇರದಾಳ ಮಾರ್ಗವಾಗಿ ಹೋಗುತ್ತಿದ್ದ ಕಾರ್‌ನ್ನು ಚೆಕ್‌ಪೋಸ್ಟ್‌ನಲ್ಲಿ ಅಧಿಕಾರಿಗಳು ತಡೆದು ತಪಾಸಣೆ ನಡೆಸಿದ ವೇಳೆ ಹಣ ಪತ್ತೆ ಆಗಿವೆ. ಹಣಕ್ಕೆ ಸೂಕ್ತ ದಾಖಲೆ ಇಲ್ಲದ ಕಾರಣ ಹಣವನ್ನು ಅಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದಾರೆ. ತೇರದಾಳ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ತಗೆದುಕೊಂಡು ಹೋಗುತ್ತಿದ್ದ ಹಣದ 7ನೇ ಪ್ರಕರಣವಾಗಿದೆ. ಪಿಎಸ್ಐ ಅಪ್ಪು ಐಗಳಿ, ಸದಾಶಿವ ತೆಳಗಿನಮನಿ, ವಿಠ್ಠಲ ಮಾನೆ ಮತ್ತಿತರಿದ್ದರು.

# ಅರ್ಬನ ಬ್ಯಾಂಕ ರಾಜ್ಯದಲ್ಲಿ 10ನೇ ಸ್ಥಾನದಲ್ಲಿದೆ: ಕಲೂತಿ



**ಜಮಖಂಡಿ :** ರಾಜ್ಯದಲ್ಲಿ ಅತಿ ಹೆಚ್ಚು ಶೇರುದಾರರನ್ನು ಹೊಂದಿರುವ ಜಮಖಂಡಿ ಅರ್ಬನ ಬ್ಯಾಂಕ ರಾಜ್ಯದ 236 ಬ್ಯಾಂಕಗಳಲ್ಲಿ 10ನೇ ಸ್ಥಾನದ ಒಳಗಡೆ ಇದೆ. ಇದು ನಮ್ಮ ಹೆಮ್ಮೆಯ ಜಮಖಂಡಿ ಅರ್ಬನ ಬ್ಯಾಂಕ ಎಂದು ಅಧ್ಯಕ್ಷ ರಾಹುಲ ಕಲೂತಿ ಹೇಳಿದರು.

ನಗರದ ಅರ್ಬನ ಬ್ಯಾಂಕ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ರಿಜರ್ವ ಬ್ಯಾಂಕ ನೂತನವಾಗಿ 6ಶಾಖೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದುದ ಶೀರ್ಘದಲ್ಲಿ ಪ್ರಾರಂಭ ಮಾಡಲಾಗುವದು. ರಾಷ್ಟ್ರೀಕೃತ ಬ್ಯಾಂಕನಲ್ಲಿ ಲಭಿಸುವ ಸೇವೆಗಳು ನಮ್ಮ ಬ್ಯಾಂಕಿನ ಗ್ರಾಹಕರಿಗೂ ನೀಡಲಾಗುವದು ಎಂದರು.

ಹೊಸದಾಗಿ ಐದು ಯೋಜನೆಗಳನ್ನು ಆರಂಭಿಸಲಾಗಿದ್ದು, ಗರಿಷ್ಠಮಟ್ಟದಲ್ಲಿ ನಮ್ಮೆಲ್ಲ ಠೇವಣಿದಾರರಿಗೆ ಬಡ್ಡಿ ನೀಡಲಾಗುತ್ತಿದೆ. ವಿಶೇಷವಾಗಿ ಮಹಿಳೆಯರಿಗಾಗಿ ದ್ವಿಗುಣ ಲಕ್ಷ್ಮೀ ನಗದು ಠೇವಣಿ ಶೇ10 ಬಡ್ಡಿ ದರ, ಸಮೃದ್ಧಿ ಸಂತತಿ ಯೋಜನೆಯಲ್ಲಿ ಶೇ9 ಬಡ್ಡಿ ದರ, ಸಮೃದ್ಧಿ ಪಂಚಪಟು ಯೋಜನೆಯಲ್ಲಿ ಶೇ9 ಬಡ್ಡಿ ದರ ಮತ್ತು ದಿ.ಅಪ್ಪಾರಾವ ಶಿಂಧೆ ಪಿಂಚಣಿ ಯೋಜನೆ ಮೂಲಕ ಚಿಂಚಣಿದಾರರಿಗೆ ಶೇ9.60 ಬಡ್ಡಿ ದರ ಜೊತೆಗೆ ಜಂಬುಕೇಶ್ವರ ಬೃಹತ್ ಧೀರ್ಘಾವಧಿ ಠೇವಣಿ ಯೋಜನೆ ಮೂಲಕ ಶೇ.10ರಷ್ಟು ಬಡ್ಡಿ ದರ ನೀಡುವ ಮೂಲಕ ಗ್ರಾಹಕರ ಹಿತಾಸಕ್ತಿ ಅರಿತುಕೊಂಡು ಹೊಸ ಯೋಜನೆಗಳನ್ನು ಆರಂಭಸಲಾಗಿದೆ. ಇಂತಹ ಯೋಜನೆಗಳನ್ನು ಇನ್ನೂವರೆಗೆ ಯಾವುದೇ ಅರ್ಬನ ಬ್ಯಾಂಕ ನೀಡಿರುವದಿಲ್ಲ ಮೊದಲಬಾರಿಗೆ ಜಮಖಂಡಿ ಅರ್ಬನ ಬ್ಯಾಂಕ ನೀಡುವ ಮೂಲಕ ಮುನ್ನಡಿ ಬರೆದಿದೆ ಎಂದರು.

ಹಿರಿಯ ನಿರ್ದೇಶಕ ಅರುಣಕುಮಾರ ಶಹಾ ಮಾತನಾಡಿ, ಕಳೆದ 84 ವರ್ಷಗಳಿಂದ ಬ್ಯಾಂಕ ಸರ್ವತೋಮುಖ ಅಭಿವೃದ್ದಿ ದಾರಿಯಲ್ಲಿ ಸಾಗುತ್ತಿದೆ. ಹೊಸ ಯೋಜನೆಗಳ ಮೂಲಕ ಉತ್ತಮ ಸೇವೆ ನೀಡುತ್ತಾ ಗ್ರಾಹಕರ ನಂಬಿಕೆಗೆ ಪಾತ್ರವಾಗಿದೆ. ಅವರೆಲ್ಲರ ನಂಬಿಕೆಯಲ್ಲಿ ಹೊಸ ಠೇವಣಿ ಯೋಜನೆಗಳು ಜಾರಿಗೊಳಿಸಲಾಗಿದೆ. ಹೊಸ ಯೋಜನೆ ಯಲ್ಲಿ ಕೇವಲ ಒಂದೇ ದಿನದಲ್ಲಿ 1 ಕೋಟಿ ಠೇವಣಿ ಹರಿದು ಬಂದಿದ್ದು, ಗ್ರಾಹಕರ ನಂಬಿಕೆ ವಿಶ್ವಾಸವನ್ನು ಬ್ಯಾಂಕ ಉಳಿಸಿಕೊಳ್ಳಲಿದೆ. ಲೋಕಸಭಾ ಚುಣಾವಣೆ ನಂತರ 6 ನೂತನ ಶಾಖೆಗಳು ಪ್ರಾರಂಭಗೊಳ್ಳಲಿವೆ ಎಂದರು.

ನಿರ್ದೇಶಕ ಜಿ.ಎಸ್.ನ್ಯಾಮಗೌಡ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಮಾಮೂನ ಪಾರ್ಥನಳ್ಳಿ, ನಿರ್ದೇಶಕರಾದ ಕಾಡು ಮಾಳಿ, ಬಸವರಾಜ ಕಲೂತಿ, ಎ.ಆರ್.ಸಿಂಧೆ, ಪ್ರಭು ಜನವಾಡ, ವಿರುಪಾಕ್ಷಿ ಕಂಬಿ, ಕಿರಣ ಪಿಸಾಳ, ಬಸಯ್ಯ ಮಠಪತಿ, ಪ್ರಕಾಶ ಅರಕೇರಿ, ಪ್ರಧಾನ ವ್ಯವಸ್ಥಾಪಕ ಸಂಗಪ್ಪ ತುಪ್ಪದ, ವ್ಯವಸ್ಥಾಪಕ ಸಂತೋಷ ಹಲ್ಯಾಳ ಸಹಿತ ಹಲವರು ಇದ್ದರು.

## ವಿಶ್ವವಿದ್ಯಾಲಯದಲ್ಲಿ ಡಾ. ಅಂಬೇಡ್ಕರ ಜಯಂತಿ ಆಚರಣೆ



**ಜಮಖಂಡಿ :** ನಗರದ ಬಾಗಲಕೋಟ ವಿಶ್ವವಿದ್ಯಾಲಯ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರರ 133ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕುಲಪತಿಗಳಾದ ಪ್ರೊ.ಆನಂದ ದೇಶಪಾಂಡೆ ಭಾವಚಿತ್ರಕ್ಕೆ ಪೂಜೆಯೊಂದಿಗೆ ಗೌರವ ಸಲ್ಲಿಸಿದರು. ಕುಲಸಚಿವ ಪ್ರೊ.ಷಣ್ಮುಖಪ್ಪ ಅಂಗಡಿ, ಹಣಕಾಸು ಅಧಿಕಾರಿ ಡಾ.ಮಲ್ಲಿಕಾರ್ಜುನ ಮರಡಿ ಸಹಿತ ಹಲವರು ಇದ್ದರು.

### ಗಮನ ಸೆಳೆದ ತೆರಬಂಡಿ ಸ್ಪರ್ಧೆ । ಚಕ್ಕಡಿ ಸ್ಪರ್ಧೆಯಲ್ಲಿ ವಿಜಯಪೂರದ ಎತ್ತುಗಳು ಪ್ರಥಮ

# ಸಂಭ್ರಮದೊಂದಿಗೆ ಅಂತ್ಯಗೊಂಡ ಐತಿಹಾಸಿಕ ಜಾನುವಾರು ಜಾತ್ರೆ



**ಜಮಖಂಡಿ :** ನಗರದ ಬೆಳಗಾವಿ–ವಿಜಯಪೂರ ರಾಜ್ಯ ಹೆದ್ದಾರಿಯಲ್ಲಿ ಬರತಕ್ಕ ಮುಧೋಳ ರಸ್ತೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮತ್ತು ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶ್ರೀ ಬಸವೇಶ್ವರ ಅಮರಾಯಿ ಜಾನುವಾರಗಳ ಬೃಹತ್ ಜಾತ್ರಾ ಸಮಾರಂಭ ಸಂಭ್ರಮದೊಂದಿಗೆ ಮುಕ್ತಾಯಗೊಂಡಿತು.

ಜಾನುವಾರ ಜಾತ್ರೆಯಲ್ಲಿ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಆರು ಹಲ್ಲಿನಿಂದ ಆರು ಹಲ್ಲುಗಳ ಹೋರಿಗಳ ಸ್ಪರ್ಧೆಯಲ್ಲಿ ಪಡತರವಾಡಿಯ ತಾನಾಜಿ ತುಕಾರಾಮ ಪಡತಾರೆ ಪ್ರಶಸ್ತಿ ಪಡೆಯಿತು. ಹಾಲು ಹಲ್ಲಿನ ಹೋರಿಗಳ ಸ್ಪರ್ಧೆಯಲ್ಲಿ ನಾವಲಗಿಯ ಭೀಮಪ್ಪ ರುದ್ರಪ್ಪ ವಾಲಿ ಎತ್ತು ಚಾಂಪಿಯನ್ ಪ್ರಶಸ್ತಿ ಪಡೆದರೆ, ಜಮಖಂಡಿಯ ಮಹಾಂತೇಶ ಸಿದ್ದಪ್ಪ ಕುಂದಗೋಳ ಪ್ರಥಮ, ಶಿರೋಳದ ಚಂದ್ರಶೇಖರ ಫಕೀರಪ್ಪ ಢವಳೇಶ್ವರ ದ್ವಿತಿಯ ಸ್ಥಾನ, ಯರಗಟ್ಟಿಯ ಸಂತೋಷ ಯಲ್ಲಪ್ಪ ಮಾಂಗ ತೃತೀಯ ಸ್ಥಾನ ಪಡೆಯಿತು. ಮುಗಳಖೋಡದ ಲಕ್ಕಪ್ಪ ನಿಂಗಪ್ಪ ಸುಣಗದ ಮತ್ತು ಹಿಪ್ಪರಗಿಯ ಸಂಗಮೇಶ ಮಲ್ಲಿಕಾರ್ಜುನ ದಳಪತಿ ಎತ್ತುಗಳು ಸಮಾಧಾನಕರ ಬಹುಮಾನ ಪಡೆದುಕೊಂಡಿವೆ.

ಎರಡು ಹಲ್ಲಿನ ಹೋರಿಗಳ ವಿಭಾಗದಲ್ಲಿ ಜನವಾಡದ ಮಲ್ಲಯ್ಯ ಮುರಗಯ್ಯ ಮಠಪತಿ ಪ್ರಥಮ, ಬಿ.ಎಂ.ಬುದ್ನಿ ಗ್ರಾಮದ ಸಂಗಪ್ಪ ಸಿದ್ರಾಮಪ್ಪ ಪೂಜಾರಿ ಎತ್ತುಗಳು ದ್ವಿತಿಯ ಸ್ಥಾನ ಪಡೆದವು. ನಾಲ್ಕು ಹಲ್ಲಿನ ಹೋರಿಗಳ ವಿಭಾಗದಲ್ಲಿ ಕುಲಹಳ್ಳಿಯ ಸದಾಶಿವ ಮಲ್ಲಪ್ಪ ತಂಬಾಕು ಎತ್ತುಗಳು ಪ್ರಥಮ, ಆಲಗೂರಿನ ಸುರೇಶ ತವನಪ್ಪ ಕೋನಗೊಂಡ ದ್ವಿತಿಯ, ಯರಗಟ್ಟಿಯ ಮಲ್ಲಪ್ಪ ಭೀಮಪ್ಪ ಮಾಂಗ ಎತ್ತುಗಳು ತೃತೀಯ ಸ್ಥಾನ ಪಡೆದರೆ, ಸಿದ್ದಾಪೂರದ ಮುತ್ತಪ್ಪ ಹಣಮಂತ ಪೂಜಾರಿ ಎತ್ತುಗಳು ಸಮಾಧಾನಕರ ಪ್ರಶಸ್ತಿ ಪಡೆಯಿತು. ಆರು ಹಲ್ಲಿನ ಹೋರಿಗಳ ವಿಭಾಗದಲ್ಲಿ ಜನವಾಡದ ಮೃತ್ಯುಂಜಯ ಮಠಪತಿ ಎತ್ತುಗಳು ಪ್ರಥಮ ಸ್ಥಾನ, ಸನಾಳದ ಬುಜಬಲಿ ಧರಿಯಪ್ಪ ಗೌರಣ್ಣವರ ದ್ವಿತಿಯ ಮತ್ತು ಶಿರೋಳದ ಕಾಡಪ್ಪ ತಿಪ್ಪಣ್ಣ ಢವಳೇಶ್ವರ ಎತ್ತುಗಳು ತೃತೀಯ ಸ್ಥಾನ ಪಡೆದುಕೊಂಡಿವೆ.

ಜೋಡಿ ಎತ್ತಿನ ವಿಭಾಗದಲ್ಲಿ ಶಿರೋಳದ ಗಿರಮಲ್ಲಪ್ಪ ತಿಪ್ಪಣ್ಣ ಢವಳೇಶ್ವರ ಚಾಂಪಿಯನ್ ಪಡೆದರೆ, ಆಲಗೂರಿನ ವಿರಾಟ ಸದಾಶಿವ ಮಾಂಗ ಪ್ರಥಮ, ಕಂಕಣವಾಡಿಯ ಕೆಂಪಣ್ಣ ಶಿವಪ್ಪ ಪಾಟೀಲ ದ್ವಿತಿಯ, ಶಿರೋಳದ ಕಾಸಪ್ಪ ಹನಮಂತ ಮಹಾಲಿಂಗಪೂರ ತೃತೀಯ ಸ್ಥಾನ ಮತ್ತು ಶಿರೋಳದ ಸದಾಶಿವ ಗುರುಪಾದಪ್ಪ ಚಿಂಚಲಿ ಎತ್ತುಗಳು ಸಮಾಧಾನಕರ ಪ್ರಶಸ್ತಿ ಪಡೆಯಿತು.

ಕಿಲಾರಿ ಆಕಳು ವಿಭಾಗದಲ್ಲಿ ನಾಗನೂರಿನ ಸುರೇಶ ಶ್ರೀಮಂತ ಕೋಷ್ಠಿ ಎತ್ತುಗಳು ಚಾಂಪಿಯನ್ ಆಯ್ಕೆಗೊಂಡಿತು. ನಾಗನೂರಿನ ಬಸವರಾಜ ಗುರುಪಾದ ಪಟ್ಟಣಶೆಟ್ಟಿ ಪ್ರಥಮ, ಕುಲಹಳ್ಳಿ ಬಸಪ್ಪ ಈರಪ್ಪ ತಂಬಾಕು ದ್ವಿತಿಯ, ಕೃಷ್ಣಪ್ಪ ಬಾಸ್ಕರ ಬಡಿಗೇರ ತೃತೀಯ ಸ್ಥಾನ ಪಡೆಯಿತು. ಇನಾಂ ಹಂಚಿನಾಳದ ಪರಪ್ಪ ಅಪ್ಪಾಸಾಬ ಕುಂಚನೂರ ಮತ್ತು ಶಿರೋಳದ ಚಿಕ್ಕಯ್ಯ ಮಲ್ಲಯ್ಯ ಜಗದಾಳ ಎತ್ತುಗಳು ಸಮಾಧಾನಕರ ಪ್ರಶಸ್ತಿ ಪಡೆಯಿತು.

ಕಿಲಾರಿ ಆಕಳ ಮಣಕುಗಳ ವಿಭಾಗದಲ್ಲಿ ಹಿಪ್ಪರಗಿಯ ಮಲ್ಲಿಕಾರ್ಜುನ ದಳಪಿತ ಕಿಲಾರಿ ಆಕಳು ಚಾಂಪಿಯನ್ ಪಡೆಯಿತು. ಜನವಾಡದ ವಿಜಯ ಮಲ್ಲಯ್ಯ ಮಠಪತಿ ಕಿಲಾರಿ ಆಕಳು ಪ್ರಥಮ, ಜನವಾಡದ ಅನ್ವರ ನೂರಸಾಬ ಪಾಟೀಲ ದ್ವಿತಿಯ, ಆಲಗೂರಿನ ತವನಪ್ಪ ನರಸಗೊಂಡ ತೃತೀಯ ಸ್ಥಾನ ಪಡೆಯಿತು. ಆಲಗೂರಿನ ದಶರಥ ಅನ್ನಪ್ಪ ನರಸಗೊಂಡ, ಕೊಣ್ಣೂರಿನ ನಿಂಗಪ್ಪ ಕರೆಪ್ಪ ದಡ್ಡೇನ್ನವರ, ಕೊಕಟನೂರಿನ ಮಲ್ಲಪ್ಪ ಶಿವಪ್ಪ ಪೂಜಾರಿ, ಸಿದ್ದಪ್ಪ ಶಿದ್ರಾಮ ಹಡಿಕರ, ಹಿಪ್ಪರಗಿಯ ಮಾಂತೇಶ ಬಸಲಿಂಗಪ್ಪ ತುಪ್ಪದ, ಕಲಹಳ್ಳಿಯ ಶಿದ್ರಾಮಪ್ಪ ಚನ್ನಪ್ಪ ಗಬಿಗೋಳ ಕಿಲಾರಿ ಆಕಳ ಮಣಕಗಳು ಸಮಾಧಾನಕರ ಪ್ರಶಸ್ತಿ ಪಡೆದುಕೊಂಡವು.

ಗಮನ ಸೆಳೆದ ತೆರಬಂಡಿ ಸ್ಪರ್ಧೆಯಲ್ಲಿ ರಬಕವಿಯ ಶಂಕರೆಮ್ಮ ಪ್ರಸನ್ನ ಎತ್ತುಗಳು 1351.03 ಫೂಟ್ ದೂರ ಎಳೆಯುವ ಮೂಲಕ ಪ್ರಥಮ ಸ್ಥಾನದೊಂದಿಗೆ ನಗದು ಬಹುಮಾನ ಪಡೆಯಿತು. ಅಕ್ಕಿಮರಡಿಯ ತರುಣ ಆನಂದ ಬೋರಡ್ಡಿ ಎತ್ತುಗಳು ದ್ವಿತಿಯ, ಬುಡರಕಟ್ಟಿಯ ಬಸವೇಶ್ವರ ಎತ್ತುಗಳು ತೃತೀಯ, ಇಟ್ನಾಳದ ಜೈ ಹನುಮಾನ ಪ್ರಸನ್ನ ಎತ್ತುಗಳು 4ನೇ ಸ್ಥಾನ, ಅಕ್ಕಿಮರಡಿಯ ರೇವಣಸಿದ್ಧೇಶ್ವರ ಪ್ರಸನ್ ಎತ್ತುಗಳು 5ನೇ ಸ್ಥಾನ, ಹುನ್ನೂರಿನ ನಂದಿಕೇಶ್ವರ ಪ್ರಸನ್ ಎತ್ತುಗಳು 6ನೇ, ಇಟ್ನಾಳದ ದುರ್ಗಾದೇವಿ ಪ್ರಸನ್ ಎತ್ತುಗಳು 7ನೇ, ಮೆಳ್ಳಿಗೇರಿಯ ವಿಜಯಕಾಂತ ಬುದ್ನಿಗೌಡ ಎತ್ತುಗಳು 8ನೇ, ಮುಗಳಖೋಡದ ಚಂದ್ರಗಿರಿ ಪ್ರಸನ್ ಎತ್ತುಗಳು 9ನೇ ಮತ್ತು ಸಾವಿರಕೊಳ್ಳದ ಸಾವಿರಕೊಳ್ಳದ ಸರದಾರ ಎತ್ತುಗಳು 10ನೇ ಸ್ಥಾನ ಪಡೆದುಕೊಂಡಿವೆ.

ರೋಚಕ ಚಕ್ಕಡಿ ಸ್ಪರ್ಧೆಯಲ್ಲಿ ವಿಜುಯಪೂರ ಸಮೀರ ಹಾಸೀಮಸಾವ ಶೇಖ ಎತ್ತುಗಳು 23.33 ನಿಮಿಷದಲ್ಲಿ ಗುರಿ ತಲುಪಿ ಪ್ರಥಮ ಸ್ಥಾನ ಪಡೆಯಿತು. ಅತಾಲಟ್ಟಿಯ ಬಸು ಕುರಿ ಎತ್ತುಗಳು ದ್ವಿತಿಯ ಸ್ಥಾನ, ಕಡಕೋಳದ ಹೆಬ್ಬಿಬಸವೇಶ್ವರ ಪ್ರಸನ್ ಎತ್ತುಗಳು ತೃತೀಯ ಸ್ಥಾನ, ರತ್ನಾಪೂರದ ಮಚ್ಚೇಂದ್ರ ಗುಂಡು ಯಡವೆ 4ನೇ ಸ್ಥಾನ, ರತ್ನಾಪೂರದ ಬಾಪುಸಾಬ ಖಾರಿ ಎತ್ತುಗಳು 5ನೇ ಸ್ಥಾನ ಪಡೆಯಿತು. ಇದೇ ಸಂದರ್ಭದಲ್ಲಿ ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು, ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಜಾತ್ರಾ ಕಮೀಟಿ ಅಧ್ಯಕ್ಷ ರುದ್ರಯ್ಯ ಕರಡಿ, ಉಪಾಧ್ಯಕ್ಷ ಮಲ್ಲೇಶ ಹೆಸಮನಿ, ಸಿದ್ರಾಮ ಜಂಬಗಿ, ಉಪವಿಭಾಗಾಧಿಕಾರಿ ಸಂತೋಷ ಕಾಮಗೊಂಡ, ತಹಶೀಲ್ದಾರ ಸದಾಶಿವ ಮಕ್ಕೋಜಿ, ನಗರಸಭೆ ಪೌರಾಯುಕ್ತೆ ಲಕ್ಷ್ಮೀ ಅಷ್ಟಗಿ, ಎಪಿಎಂಸಿ ಕಾರ್ಯದರ್ಶಿ ಅಬೀದಾಬೇಗಂ ಮುಲ್ಲಾ, ಪಶುವೈದ್ಯಾಧಿಕಾರಿ ಎಸ.ಎಸ್.ನಾಗರಾಳ, ಸಿದ್ರಾಮ ಜಂಬಗಿ, ಮಾದೇವಪ್ಪ ತೆಲಬಕ್ಕನವರ, ನಿಂಗಪ್ಪ ನ್ಯಾಮಗೌಡ, ಎ.ಆರ್. ರಾಮಗೊಂಡ, ಶ್ರೀಶೈಲ ಚಿಟಗೌಡರ, ಎಪಿಎಂಸಿ ಅಧಿಕಾರಿಗಳಾದ ವಿಲಾಸ ಕಬನೂರ, ಎ.ಎಸ್. ನಂದಗಾವ ಸಹಿತ ಹಲವರು ಇದ್ದರು.

# ಮನ್ನಿಕೇರಿ ಮಹಾಂತಲಿಂಗೇಶ್ವರ ಜಾತ್ರಾ ಮಹೋತ್ಸವ

**ಮೂಡಲಗಿ:** ಸಮೀಪದ ಮನ್ನಿಕೇರಿ ಮಹಾಂತಲಿಂಗೇಶ್ವರ ಜಾತ್ರಾ ಮಹೋತ್ಸವ ಏ–18 ರಿಂದ 22 ರವರೆಗೆ ಮಹಾಂತಲಿಂಗೇಶ್ವರ ಮಠದ ಪೀಠಾಧ್ಯಕ್ಷರಾದ ವಿಜಯಸಿದ್ದೇಶ್ವರ ಮಹಾಸ್ವಾಮಿಗಳ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಲಿದೆ.

ಗುರುವಾರ ಏ–18 ರಂದು ಸಾಯಂಕಾಲ ಜಾತ್ರಾ ಪೂಜಾ ಹಾಗೂ ಪ್ರವಚನ ಕಾರ್ಯಕ್ರಮಗಳೊಂದಿಗೆ ಜಾತ್ರೆ ಆರಂಭವಾಗುತ್ತದೆ. ಏ–19 ರಂದು ಪುರುಷರ ಪ್ರೊ–ಮ್ಯಾಟ್ ಕಬಡ್ಡಿ ಪಂದ್ಯಾವಳಿಗಳಿದ್ದು, ಸಾಯಂಕಾಲ ರಂಗೋಲಿ ಸ್ಪರ್ಧೆ ನಡೆಯಲಿದೆ. ಶನಿವಾರ ಏ–20 ರಂದು ಜೋಡು ಎತ್ತಿನ ತೆರೆಬಂಡಿ ಸ್ಪರ್ಧೆಯಿದೆ. ಏ–21 ರಂದು ಓಟದ ಸ್ಪರ್ಧೆ, ಕುದುರೆ–ಬಂಡಿ ಸ್ಪರ್ಧೆ ಮತ್ತು ಟ್ರ್ಯಾಕ್ಟರ್ ರಿವರ್ಸ್ ಸ್ಪರ್ಧೆ ನಡೆಯಲಿದೆ. ಸೋಮವಾರ ಏ–22 ರಂದು ಮುಂಜಾನೆ 5 ಗಂಟೆ ಕರ್ತೃ ಗದ್ದುಗೆಗೆ ವಿಶೇಷ ಪೂಜಾಭಿಷೇಕ, ರಥದ ಕಳಸಾರೋಹಣ, ಪಲ್ಲಕ್ಕಿ ಉತ್ಸವ ಜರುಗಲಿದೆ. ಆದಿನ ಸ್ಲೋ ಸೈಕಲ್ ಸ್ಪರ್ಧೆ, ಮ್ಯುಜಿಕಲ್ ಚೇರ್ ಸ್ಪರ್ಧೆಗಳಿದ್ದು, ಸಾಯಂಕಾಲ 5:30 ಗಂಟೆಗೆ ಮಹಾಂತಲಿಂಗೇಶ್ವರ ಭವ್ಯ ರಥೋತ್ಸವ ಜರುಗುವದು.

ಜಾತ್ರಾ ಮಹೋತ್ಸವದ ನಿಮಿತ್ತ ಏ–18 ರಿಂದ ಏ–21 ರವರೆಗೆ ಸೇವೆಯ ಪರಿಣಾಮವೇನು? ಸಂಘದ ಪರಿಣಾಮವೇನು? ಸಾಧನೆಯ ಪರಿಣಾಮವೇನು? ಮತ್ತು ಜ್ಞಾನದ ಪರಿಣಾಮವೇನು? ಮುಂತಾದ ವಿಷಯಗಳ ಕುರಿತು ವಿಶೇಷ ಪ್ರವಚನ ನಡೆಯಲಿದ್ದು, ನಾಡಿನ ವಿವಿಧ ಮಠಾಧೀಶರು, ಪ್ರವಚನಕಾರರು ಆಧ್ಯಾತ್ಮಿಕ ಅನುಭೂತಿಯನ್ನು ಉಣಬಡಿಸಲಿದ್ದು, ಸಮಸ್ತ ಸದ್ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಮಹಾಂತಲಿಂಗೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಮನ್ನಿಕೇರಿ ಮಹಾಂತಲಿಂಗೇಶ್ವರ ಮಠದ ಪೀಠಾಧ್ಯಕ್ಷ ವಿಜಯಸಿದ್ದೇಶ್ವರ ಮಹಾಸ್ವಾಮಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ (ಹೆಚ್ಚಿನ ಮಾಹಿತಿಗಾಗಿ ಮೊ: 7353952030, 8618051559 ಮತ್ತು 8317483250 ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಬಹುದು).

### ಮತದಾನ ಜಾಗೃತಿಗೆ ಜಿಲ್ಲಾ ಸ್ವೀಪ್ ವಿನೂತನ ಪ್ರಯೋಗ

# ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಮತದಾನ ಜಾಗೃತಿ ಮೂಡಿಸಿದ ಸಿಇಓ





**ಬಾಗಲಕೋಟೆ :** ಜಿಲ್ಲೆಯಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗುವಂತೆ ಮಾಡುವ ನಿಟ್ಟಿನಲ್ಲಿ ನವನಗರದ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳನ್ನು ಏರಿ ಪ್ರಯಾಣಿಕರಿಗೆ ಕರ ಪತ್ರ ಹಂಚುವ ಮೂಲಕ ಮತದಾನ ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆದ ಜಿ.ಪಂ ಸಿಇಓ ಶಶಿಧರ ಕುರೇರ ಮುಂದಾದರು.

ಜಿಲ್ಲಾ ಸ್ವೀಪ್ ಸಮಿತಿಯು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಮತದಾನದ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ನವನಗರದ ಬಸ್ ನಿಲ್ದಾಣದಲ್ಲಿರುವ ಪ್ರಯಾಣಿಕರಿಗೆ ಮತದಾನ ಮಹತ್ವ ಸಾರಲು ಎಲ್‌ಇಡಿ ಪರದೆಯ ಮೂಲಕ ಮತದಾನ ಜಾಗೃತಿ ಗೀತೆಗಳ ವಿಡಿಯೋ ಪ್ರಸಾರಕ್ಕೆ ಚಾಲನೆ ನೀಡಿ ನಂತರ ಬಸ್ ನಿಲ್ದಾಣದಲ್ಲಿದ್ದ ಯುವಕರ, ಯುವತಿಯರಿಗೆ, ಹಿರಿಯ ನಾಗರಿಕರಿಗೆ ಹಾಗೂ ಇತರೆ ಅರ್ಹ ಮಹತದಾರರಿಗೆ ಜಾಗೃತಿಯ ಕರ ಪತ್ರಗಳನ್ನು ಹಂಚಿದರು.

ಅಲ್ಲದೇ ಬಸ್ ನಿಲ್ದಾಣಕ್ಕೆ ಬರುವ ಬಸ್‌ಗಳನ್ನು ಏರಿ ಬಸ್‌ನಲ್ಲಿರುವ ಪ್ರಯಾಣಿಕರಿಗೆ ಮತದಾನ ಜಾಗೃತಿಯ ಕರ ಪತ್ರಗಳನ್ನು ಹಂಚುವ ಮೂಲಕ ಪ್ರತಿಯೊಬ್ಬ ಮತದಾರರು ಬರುವ ಮೇ 7 ರಂದು ತಪ್ಪದೇ ಮತಗಟ್ಟೆಗೆ ತೆರಳಿ ತಮ್ಮ ಹಕ್ಕನ್ನು ಚಲಾಯಿಸುವಂತೆ ತಿಳಿಸಿದರು. ಮತದಾನದಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಳ್ಳಬೇಕು. ತಾವು ಮತದಾನ ಚಲಾಯಿಸುವದರ ಜೊತೆಗೆ ಮತದಾನದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಯಪಡಿಸಬೇಕು ಎಂದರು.

ನಂತರ ಬಸ್ ನಿಲ್ದಾಣದಲ್ಲಿ ನೆರೆದ ಪ್ರಯಾಣಿಕರಿಗೆ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷ ಶಶಿಧರ ಕುರೇರ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಜಾಪ್ರಭುತ್ವದಲ್ಲಿ ದೃಡವಿಶ್ವಾಸವುಳ್ಳ ಭಾರತದ ಪೌರರಾದ ನಾವು, ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ, ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡುಯುತ್ತೇವೆಂದು ಮತ್ತು ಪ್ರತಿಯೊಂದು ಚುನಾವಣೆಗಳಲ್ಲಿ ನಿರ್ಭಿತರಾಗಿ ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳ ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ ಮತ ಚಲಾಯಿಸುತ್ತೇವೆಂದು ಬಸ್ ನಿಲ್ದಾಣದಲ್ಲಿದ್ದ ಪ್ರಯಾಣಿಕರು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಅಮರೇಶ ನಾಯಕ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾ ನಿರ್ದೇಶಕ ಪುನಿತ್, ಯೋಜನಾ ನಿರ್ದೇಶಕ ಶಶಿಕಾಂತ ಶಿವಪುರೆ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಜಿಲ್ಲಾ ಸಂಚಾರಿ ಅಧಿಕಾರಿ ಪಿ.ವಿ.ಮೈತ್ರಿ, ಬಾಗಲಕೋಟೆ ಘಟಕ ವ್ಯವಸ್ಥಾಪಕ ಎ.ಎ.ಕೋರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State